

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine


Vol -66 | Issue-05 | May 2025 | Pages: 24 | Annual Subscription: ₹ 200/-

ಸಂಪುಟ: 66 | ಸಂಚಿಕೆ: 05 | ಮೇ 2025 | ಪುಟಗಳು: 24 | ವಾರ್ಷಿಕ ಚಂದ ರೂ. 200/-




'ಆಪರೇಷನ್ ಸಿಂಧೂರ್' ಯಶಸ್ವಿಗೊಳಿಸಿದ ಸೈನಿಕರಿಗೆ ತಿರಂಗ ಯಾತ್ರೆಯ ಮೂಲಕ ಗೌರವ ವಂದನೆ ಸಲ್ಲಿಸುತ್ತಿರುವ ಸ್ಕೌಟ್ಸ್-ಗೈಡ್ಸ್ ಹಾಗು ರೋವರ್ಸ್-ರೇಂಜರ್ಸ್



ಮೇ 9 ರಿಂದ 11ರ ವರೆಗೆ ದಕ್ಷಿಣ ಕನ್ನಡ ಜಿಲ್ಲೆ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ ಸುಬ್ರಹ್ಮಣ್ಯ ಇಲ್ಲಿ ನಡೆದ ರೋವರ್ಸ್–ರೇಂಜರ್ಸ್‌ಗಳ ರಾಜ್ಯ ಮಟ್ಟದ ಚಾರಣ ಶಿಬಿರವನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಉದ್ಘಾಟಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ವಿಮಲಾ ರಂಗಯ್ಯ, ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಗಣೇಶ್ ನಾಯಕ್, ಎಸ್.ಓ.ಸಿ ಶ್ರೀ ಎಂ. ಪ್ರಭಾಕರ್‌ಭಟ್, ನಾಯಕರಾದ ಶ್ರೀ ದಾಮೋದರಿ ನೇರಳ ಮತ್ತು ಇತರ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮೇ 24 ರಿಂದ 26ರ ವರೆಗೆ ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲ್ಲೂಕು, ಅಳ್ವೆಕೋಡಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಡೆದ ರಾಜ್ಯಮಟ್ಟದ ಕಡಲತೀರ ಚಾರಣ ಶಿಬಿರದ ಉದ್ಘಾಟನೆಯನ್ನು ಧರ್ಮದರ್ಶಿಗಳಾದ ಶ್ರೀ ನಾರಾಯಣ್ ಗಣಪತಿ ದೈಮನೆಯವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಜಿ.ಜಿ. ಸಬಾಹಿತ್ ವಹಿಸಿದ್ದರು. ಅತಿಥಿಗಳಾಗಿ ಧರ್ಮದರ್ಶಿಗಳಾದ ಶ್ರೀ ಹನುಮಂತನಾಯಕ್ ದೇವಸ್ಥಾನದ ಅಧ್ಯಕ್ಷರಾದ, ಶ್ರೀ ವಿಠ್ಠಲ್ ದೈಮನೆ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್ ಇತರ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 66 Issue: 05 May 2025

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 200/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು,
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಜೂನ್ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು ...05

ಸಂಪಾದಕೀಯ ...06

ಸ್ಥಳೀಯ/ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳ, ಜಂಟಿ ಕಾರ್ಯದರ್ಶಿಗಳ ಮತ್ತು ಸಹಾಯಕ ಕಾರ್ಯದರ್ಶಿಗಳ ರಾಜ್ಯ ಮಟ್ಟದ ತರಬೇತಿ ಶಿಬಿರ ಮತ್ತು ದಳನಾಯಕ-ನಾಯಕಿಯರ ಗಾಯನ ತರಬೇತಿ ಶಿಬಿರ ...07

ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ ...08

ರಾಜ್ಯ ಮಟ್ಟದ ರೋವರ್-ರೇಂಜರ್ ಕೌಶಲ್ಯ ತರಬೇತಿ ಮತ್ತು ಸೇವಾ ಶಿಬಿರ ...09

ರಾಜ್ಯ ಸಂಸ್ಥೆಯಿಂದ ನಡೆದ ಸಭೆಗಳು ...10

2024-25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 90% ಕ್ಕಿಂತ ಹೆಚ್ಚು ಅಂಕಗಳಿಸಿದ ಸ್ಕೌಟ್ಸ್-ಗೈಡ್ಸ್‌ಗಳು ...13

ಜಿಲ್ಲಾ ವಾರ್ತೆಗಳು ...15

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್‌ನ ಪುಸ್ತಕಗಳನ್ನು ಓದಲು ಕೆಳಗಿನ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸ್ಕೌಟ್ಸ್ ಗೈಡ್ಸ್ ಬಂಧುಗಳೇ,

ಮೇ ತಿಂಗಳಲ್ಲಿ ರಾಜ್ಯದ ವಿವಿಧೆಡೆ ನಡೆದ ಸ್ಕೌಟ್ಸ್ ಮತ್ತು ಗೈಡ್ಸ್ ಶಿಬಿರಗಳು, ತರಬೇತಿ ಕಾರ್ಯಕ್ರಮಗಳು ಮತ್ತು ಸಭೆಗಳ ಸರಮಾಲೆ ಅಸಾಧಾರಣ ಯಶಸ್ಸು ಕಂಡಿವೆ. ಈ ಎಲ್ಲ ಚಟುವಟಿಕೆಗಳು ಸ್ಕೌಟಿಂಗ್ ಮತ್ತು ಗೈಡಿಂಗ್ ಚಳುವಳಿಗೆ ಹೊಸ ಉತ್ಸಾಹ, ಉಜ್ವಲ ಭವಿಷ್ಯದ ದಿಶೆಯನ್ನು ನೀಡಿವೆ ಎಂದರೆ ತಪ್ಪಾಗಲಾರದು.

ದಾವಣಗೆರೆ ಜಿಲ್ಲೆಯ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಮತ್ತು ಪಿ.ಎಸ್.ಎಸ್.ಇ.ಎಂ.ಆರ್ ಶಾಲೆಯ ಸಹಯೋಗದೊಂದಿಗೆ ಕೊಂಡಜ್ಜಿ ತರಬೇತಿ ಕೇಂದ್ರದಲ್ಲಿ ಕಬ್ ಮಾಸ್ಟರ್, ಫ್ಲಾಕ್ ಲೀಡರ್ ಹಾಗೂ ಬನ್ನಿ ಲೀಡರ್‌ಗಳಿಗೆ ನಡೆದ ಮೂಲ ತರಬೇತಿ ಶಿಬಿರ, ದೊಡ್ಡಬಳ್ಳಾಪುರದ ತರಬೇತಿ ಕೇಂದ್ರದಲ್ಲಿ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳಿಗೆ ಆಯೋಜಿಸಿದ್ದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ, ರಾಜ್ಯ ಮಟ್ಟದ ಜಿಲ್ಲಾ ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳಿಗೆ ಆಯೋಜಿಸಿದ್ದ ತರಬೇತಿ ಶಿಬಿರ, ಕುಕ್ಕೆ ಸುಬ್ರಮಣ್ಯದಲ್ಲಿ ಹಾಗೂ ಕಾರವಾರದಲ್ಲಿ ನಡೆದ ರಾಜ್ಯ ಮಟ್ಟದ ರೋವರ್ ಮತ್ತು ರೇಂಜರ್ ಚಾರಣ ಶಿಬಿರಗಳು, ಹಾಸನದ ಹೆಚ್.ಕೆ.ಎಸ್. ಅಂತರಾಷ್ಟ್ರೀಯ ಶಾಲೆಯಲ್ಲಿ ಮತ್ತು ಬೆಂಗಳೂರು ಉತ್ತರ ಜಿಲ್ಲೆಯಿಂದ ಆಯೋಜಿಸಿದ್ದ ಶಿಬಿರಗಳೆಲ್ಲವೂ ಪ್ರಶಂಸಾರ್ಹ ರೀತಿಯಲ್ಲಿ ಯಶಸ್ಸನ್ನು ಕಂಡಿವೆ.

ಮೇ 5 ರಂದು ನಾಡೋಜ ಶ್ರೀ ಗೊ.ರು. ಚನ್ನಬಸಪ್ಪ ಅವರ ಘನ ಉಪಸ್ಥಿತಿಯಲ್ಲಿ ಆರಂಭಗೊಂಡು ಸುಮಾರು 7 ದಿನಗಳ ಕಾಲ ನಡೆದ  ನಮ್ಮ ಸಂಸ್ಥೆಯ ರಾಜ್ಯಮಟ್ಟದ ವಿವಿಧ ಸಮಿತಿಗಳ ಸಭೆಗಳಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಹಲವಾರು ಪದಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿ, ಯಶಸ್ವಿಗೊಳಿಸಿದ್ದಾರೆ. ರಾಜ್ಯ ಟ್ರಸ್ಟ್ ಸಮಿತಿ, ಶಾಂತಿಗೃಹ, ಕೊಂಡಜ್ಜಿ, ದೊಡ್ಡಬಳ್ಳಾಪುರದ ಶಿಬಿರ ಕೇಂದ್ರಗಳ ಅಭಿವೃದ್ಧಿ ಸಮಿತಿ, ರಾಜ್ಯ ಯುವ ಸಮಿತಿ, ಹಣಕಾಸು ಸಮಿತಿ, ಸಾಮಗ್ರಿ ಮಳಿಗೆ ಸಮಿತಿ, ತರಬೇತಿ ಮತ್ತು ವಯಸ್ಕ ಸಂಪನ್ಮೂಲ ಸಮಿತಿಗಳು ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸಭೆಗಳು ಸದಸ್ಯರ ಸಕ್ರಿಯ ಭಾಗವಹಿಸುವಿಕೆಯಿಂದಾಗಿ ಯಶಸ್ವಿಯಾಗಿ ನಡೆದಿವೆ. ಈ ಸಭೆಗಳಲ್ಲಿ ಸದಸ್ಯರು ವ್ಯಕ್ತಪಡಿಸಿರುವ ಅರ್ಥಪೂರ್ಣ ಸಲಹೆಗಳು, ಅಭಿಪ್ರಾಯಗಳು ಈ ವರ್ಷದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಗೆ ಸ್ಪಷ್ಟ ಮಾರ್ಗದರ್ಶನವನ್ನು ನೀಡಿವೆ. ಇದು ಮುಂದಿನ ಹಂತದ ಅಭಿವೃದ್ಧಿಗೆ ಬಲವಾದ ಪೂರಕ ಶಕ್ತಿಯಾಗಿ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸವನ್ನು ಹೊಂದಿದ್ದೇನೆ.

ಈ ಬಾರಿಯ ಕಾರ್ಯಕಾರಿ ಸಮಿತಿ ಸಭೆಯು ಸ್ಮರಣೀಯ ಕ್ಷಣಗಳಿಂದ ಕೂಡಿತ್ತು. ವಿಶೇಷವಾಗಿ 92ನೇ ವಯಸ್ಸಿನಲ್ಲೂ ಉತ್ಸಾಹ ಮತ್ತು ಸ್ಫೂರ್ತಿಯಿಂದಿರುವ ನಮ್ಮ ಚಳುವಳಿಯ ಹಿರಿಯ ಗೈಡ್ ಆಯುಕ್ತೆಯೂ ಆಗಿದ್ದ ಪ್ರಸಿದ್ಧ ಸಾಹಿತಿ ಶ್ರೀಮತಿ ಲಲಿತಮ್ಮ ಅವರ ಉಪಸ್ಥಿತಿ ಸಭೆಗೆ ನಿಜಕ್ಕೂ ಪ್ರೇರಣಾದಾಯಕ ಕ್ಷಣವನ್ನು ತಂದಿತು. ಅವರು ಸ್ಕೌಟ್–ಗೈಡ್ ಚಳವಳಿಯಲ್ಲಿ ಕಳೆದ ಹಲವಾರು ದಶಕಗಳ ತಮ್ಮ ಅನುಭವವನ್ನು ಹಂಚಿಕೊಂಡರು. ತಾವು ಅಳವಡಿಸಿಕೊಂಡು ಬಂದಿರುವ ಶ್ರದ್ಧೆ ಹಾಗೂ ಜೀವನಾನುಭವದ ಮೌಲ್ಯಯುತ ಸಂದೇಶಗಳ ಮೂಲಕ, ಎಲ್ಲರ ಮನಸ್ಸಿಗೆ ಸ್ಪರ್ಶಿಸುವಂತೆ ಮಾತನಾಡಿದರು. ಅವರ ಮಾತುಗಳಲ್ಲಿ ಮೆರೆದ ಹಳೆಯ ದಿನಗಳ ಸ್ಮೃತಿ ಚಿತ್ರಗಳು ಇಂದು ನಮ್ಮ ಚಳುವಳಿಯ ಘನತೆಯನ್ನು ನಮಗೆ ನೆನಪಿಸಿತು.

ಇನ್ನು ಜೂನ್ ತಿಂಗಳಲ್ಲಿ ಹಲವು ಮಹತ್ವದ ಕಾರ್ಯಕ್ರಮಗಳು ಜರುಗಲಿದ್ದು, ಇವುಗಳಲ್ಲಿ ಎಲ್ಲರ ಸಕ್ರಿಯ ಸಹಭಾಗಿತ್ವದ ಅಗತ್ಯವಿದೆ. ಚಳವಳಿಯ ಪ್ರಗತಿಗೆ ಎಲ್ಲ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳ ಪಾಲ್ಗೊಳ್ಳುವಿಕೆ ಅತ್ಯಂತ ಮುಖ್ಯವಾಗಿರುತ್ತದೆ. ಜೂನ್ 5 ವಿಶ್ವ ಪರಿಸರ ದಿನಾಚರಣೆ. ದಳ ಹಂತದಿಂದ ರಾಜ್ಯ ಮಟ್ಟದವರೆಗೆ ಪರಿಸರ ದಿನವನ್ನು ಶ್ರದ್ಧಾಪೂರ್ವಕವಾಗಿ ಆಚರಿಸಬೇಕು. ಪರಿಸರ ಸಂರಕ್ಷಣೆಯ ಪ್ರಾಮುಖ್ಯತೆಯ ಬಗ್ಗೆ ಯುವ ಪೀಳಿಗೆಗೆ ಅರಿವು ಮೂಡಿಸಿ, ಹಸಿರು ಭವಿಷ್ಯ ನಿರ್ಮಾಣದಲ್ಲಿ ಎಲ್ಲರೂ ತಮ್ಮ ತಮ್ಮ ಜವಾಬ್ದಾರಿಯನ್ನು ಮೆರೆಯಬೇಕು. ನಾವು ಕಳೆದ 2–3 ತಿಂಗಳಿಂದ ವಿವಿಧ ಸಲಹೆಗಳು ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಿ ರೂಪಿಸಿರುವ ವಾರ್ಷಿಕ ಯೋಜನಾ ಪುಸ್ತಕ 2025–26 ಈ ತಿಂಗಳಲ್ಲಿ ಅಧಿಕೃತವಾಗಿ ಬಿಡುಗಡೆಯಾಗುತ್ತಿದೆ. ಇವುಗಳನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ, ಖಾಸಗಿ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳಿಗೆ, ವಿವಿಧ ಮಠಮಾನ್ಯರಿಗೆ ತಲುಪಿಸಿ, ಆ ಮೂಲಕ ಸಂಸ್ಥೆಯ ಉದ್ದೇಶಗಳು, ಕಾರ್ಯಚಟುವಟಿಕೆಗಳು ಮತ್ತು ಗುರಿಗಳಿಗೆ ಸ್ಪಷ್ಟ ದಿಕ್ಕು ದೊರಕುವಂತೆ ಶ್ರಮಿಸಬೇಕು. ಜೂನ್ 21 ಅಂತರಾಷ್ಟ್ರೀಯ ಯೋಗ ದಿನ. ಯೋಗದ ಮಹತ್ವವನ್ನು ಎಲ್ಲರಿಗೂ ತಲುಪಿಸುವ ಉದ್ದೇಶದಿಂದ, ಯೋಗ ಸಪ್ತಾಹ ಕಾರ್ಯಕ್ರಮಗಳನ್ನು ದಳ ಹಂತದಲ್ಲಿ ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕು.

ಜೂನ್ ತಿಂಗಳಲ್ಲಿ ರಾಜ್ಯ, ಜಿಲ್ಲಾ ಮತ್ತು ಸ್ಥಳೀಯ ಮಟ್ಟಗಳಲ್ಲಿ ಸ್ಕೌಟರ್ ಮತ್ತು ಗೈಡರ್ಸ್‌ಗಳ ಸಮಾವೇಶಗಳನ್ನು ಆಯೋಜಿಸಬೇಕಾಗಿದೆ. ದೊಡ್ಡಬಳ್ಳಾಪುರ, ಕೊಂಡಜ್ಜಿ, ವಿಜಯಪುರ ಹಾಗೂ ಧಾರವಾಡದ ನಮ್ಮ ತರಬೇತಿ ಕೇಂದ್ರಗಳಲ್ಲಿ ವಿಭಾಗೀಯ ಮಟ್ಟದ ಕಬ್ ಮಾಸ್ಟರ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಮುಂದುವರೆದ ತರಬೇತಿ ಶಿಬಿರಗಳು ನಡೆಯಲಿವೆ. ಅರ್ಹರೆಲ್ಲರೂ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳು ತಮ್ಮ ಜವಾಬ್ದಾರಿಯನ್ನು ಮೆರೆಯುವಂತೆ ಕೋರುತ್ತೇನೆ.

ಈ ಎಲ್ಲಾ ಕಾರ್ಯಕ್ರಮಗಳು ನಮ್ಮ ಚಳವಳಿಯ ಸಂಘಟಿತ ಶಕ್ತಿಯನ್ನು ಪ್ರತಿಬಿಂಬಿಸುವ ಅಮೂಲ್ಯ ಅವಕಾಶಗಳಾಗಿವೆ. ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳು ಸಂಪೂರ್ಣ ಶ್ರದ್ಧೆ ಮತ್ತು ಉತ್ಸಾಹದಿಂದ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಮನವಿ.

'ಹಾರ್ಟ್ ಲ್ಯಾಂಪ್' ಕಥಾ ಸಂಕಲನಕ್ಕೆ ಬಹು ನಿರೀಕ್ಷಿತ ಅಂತರಾಷ್ಟ್ರೀಯ ಬೂಕರ್ ಪ್ರಶಸ್ತಿ–2025 ಲಭಿಸಿರುವುದು ಕನ್ನಡ ಸಾಹಿತ್ಯದ ಐತಿಹಾಸಿಕ ಸಾಧನೆ.  ಈ ಮೂಲಕ ಕಥೆಗಾರ್ತಿ ಶ್ರೀಮತಿ ಬಾನು ಮುಸ್ತಾಕ್ ಅವರು ಕನ್ನಡ ನಾಡು ಮತ್ತು ನುಡಿಯ ಹಿರಿಮೆಯನ್ನು ವಿಶ್ವಮಟ್ಟದಲ್ಲಿ ಎತ್ತಿಹಿಡಿದಿದ್ದಾರೆ. ಅವರ ಜೊತೆ ಈ ಕೃತಿಯ ಅನುವಾದಕಿಯಾಗಿ ಸಹಕಾರ ನೀಡಿರುವ ಶ್ರೀಮತಿ ದೀಪಾ ಬಾಸ್ತಿ ಅವರಿಗೂ ಈ ಗೌರವ ಲಭಿಸಿದ್ದು, ಇದು ಕನ್ನಡಿಗರ ಗರಿಮೆ ಹಾಗೂ ಹೆಮ್ಮೆಯ ವಿಚಾರವಾಗಿದೆ. ಭಾನು ಮುಸ್ತಾಕ್ ಮತ್ತು ದೀಪಾ ಬಾಸ್ತಿ ಅವರಿಗೆ ನಮ್ಮ ಸಂಸ್ಥೆಯ ಪರವಾಗಿ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.

2024–25ನೇ ಶೈಕ್ಷಣಿಕ ವರ್ಷಕ್ಕೆ ಶಾಲೆಗಳು ಪುನರಾರಂಭವಾಗುತ್ತಿರುವ ಈ ಸಂದರ್ಭದಲ್ಲಿ, ಎಲ್ಲ ವಿದ್ಯಾರ್ಥಿಗಳಿಗೂ ಶುಭಾಶಯಗಳನ್ನು ತಿಳಿಸುತ್ತೇನೆ.

ನಾಡಿನ ಪ್ರಸಿದ್ಧ ಸಾಹಿತಿ, ಕವಿ, ವಿಮರ್ಶಕರಾಗಿದ್ದ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ.ಎಸ್.ಸಿದ್ದಲಿಂಗಯ್ಯ ಅವರು ಇತ್ತೀಚೆಗೆ ಇಹಲೋಕವನ್ನು ತ್ಯಜಿಸಿದ್ದಾರೆ. ಅವರ ನಿಧನವು ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ನಷ್ಟವನ್ನುಂಟುಮಾಡಿದೆ. ಅವರ ಅಗಲಿಕೆಗೆ ನಮ್ಮ ಸಂಸ್ಥೆ ಪರವಾಗಿ ಮತ್ತು ವೈಯಕ್ತಿಕವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಮಳೆಗಾಲ ಆರಂಭವಾಗಿರುವ ಈ ಸಮಯದಲ್ಲಿ ಸಾಂಕ್ರಾಮಿಕ ರೋಗಳ ಪ್ರಮಾಣ ಹೆಚ್ಚಾಗಬಹುದು. ಜೊತೆಗೆ ಮತ್ತೆ ಕೆಲವು ಪ್ರದೇಶಗಳಲ್ಲಿ ಕೋವಿಡ್ ಲಕ್ಷಣಗಳು ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ನಾವೆಲ್ಲರೂ ಎಚ್ಚರಿಕೆಯಿಂದಿರುವುದು ಅಗತ್ಯ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಜೂನ್ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಪರಿಸರ ದಿನಾಚರಣೆ | 05.06.2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 2 | 2025–26ನೇ ಸಾಲಿನ ಯೋಜನಾ ಪುಸ್ತಕದ ಬಿಡುಗಡೆ ಸಮಾರಂಭ | | ಎಲ್ಲಾ ಹಂತಗಳಲ್ಲಿ |
| 3 | ಸ್ಥಳೀಯ ಮತ್ತು ಜಿಲ್ಲಾ ಮಟ್ಟದ ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶಗಳು | | ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳಲ್ಲಿ |
| 4 | ರಾಜ್ಯ ಮಟ್ಟದ ಐತಿಹಾಸಿಕ ಮತ್ತು ಸ್ಮಾರಕಗಳ ತಿಳುವಳಿಕೆ ಕಾರ್ಯಕ್ರಮ | | ಕೂಡಲ ಸಂಗಮ, ಹುನಗುಂದ ತಾ॥, ಬಾಗಲಕೋಟೆ ಜಿಲ್ಲೆ |
| 5 | ರಾಜ್ಯ ಮಟ್ಟದ ಕರಕುಶಲತೆ ಮತ್ತು ಕಸೂತಿ ವಿಶೇಷ ತರಬೇತಿ ಶಿಬಿರ | | ಜಿಲ್ಲಾ ಸ್ಕೌಟ್ ಭವನ, ಕೋಲಾರ ಜಿಲ್ಲೆ |
| 6 | ಅಂತರಾಷ್ಟ್ರೀಯ ಯೋಗ ದಿನಾಚರಣೆ (ಯೋಗ ಸಪ್ತಾಹ ಕಾರ್ಯಕ್ರಮಗಳು) | 21.06.2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 7 | ವಿಭಾಗೀಯ ಮಟ್ಟದ ಕಬ್ ಮಾಸ್ಟರ್/ ಫ್ಲಾಕ್ ಲೀಡರ್/ ಸ್ಕೌಟ್ ಮಾಸ್ಟರ್/ ಗೈಡ್ ಕ್ಯಾಪ್ಟನ್‌ರವರ ಮುಂದುವರೆದ ತರಬೇತಿ ಶಿಬಿರಗಳು | 24.06.2025 ರಿಂದ | 1. ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ<br>2. ಕೊಂಡಜ್ಜಿ ಬಸಪ್ಪ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ<br>3. ಜಿಲ್ಲಾ ತರಬೇತಿ ಕೇಂದ್ರ, ಬುರಣಾಪುರ, ವಿಜಯಪುರ ಜಿಲ್ಲೆ<br>4. ಜಿಲ್ಲಾ ತರಬೇತಿ ಕೇಂದ್ರ, ದಡ್ಡಿಕಮಲಾಪುರ ಧಾರವಾಡ ಜಿಲ್ಲೆ<br>5. ಜಿಲ್ಲಾ ತರಬೇತಿ ಕೇಂದ್ರ, ಗುನ್ನಾಳ ಕೊಪ್ಪಳ ಜಿಲ್ಲೆ<br>6. ಡಾ॥ ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ, ಅಲೆವೂರ, ಉಡುಪಿ ಜಿಲ್ಲೆ |

## ಅಭಿನಂದನೆಗಳು





**ರಾಜ್ಯ ಯುವ ಸಮಿತಿಗೆ ಅಧ್ಯಕ್ಷರಾಗಿ ಕಾರ್ತಿಕ್ ರಾಮಚಂದ್ರ,ಬೆಂಗಳೂರು ದಕ್ಷಿಣ ಜಿಲ್ಲೆ.**
**ಉಪಾಧ್ಯಕ್ಷರಾಗಿ ಪ್ರಮೀಳ ಕುನ್ವಾರ್, ಮೈಸೂರು ಜಿಲ್ಲೆ ಆಯ್ಕೆಯಾಗಿರುತ್ತಾರೆ**

# ಸಂಪಾದಕೀಯ



ಮಾನ್ಯರೆ,

ಯಾವುದೇ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದಕ್ಕಿಂತ ಪೂರ್ವಭಾವಿಯಾಗಿ ಚಿಂತನ–ಮಂಥನ ಮಾಡಿದ್ದಲ್ಲಿ ಆ ಕಾರ್ಯಚಟುವಟಿಕೆಗಳು ಯಶಸ್ವಿಯಾಗಿ ನಿರ್ವಹಣೆ ಆಗುವುದು ಎಂಬುದು ದಿಟ. **Planning is half done** ಎಂಬಂತೆ ಮಾಡುವ ಕಾರ್ಯಕ್ರಮಗಳು, ಚಟುವಟಿಕೆಗಳು ಮತ್ತು ತರಬೇತಿಗಳ ಬಗ್ಗೆ ಮುಂಚಿತವಾಗಿ ಯೋಜಿಸಿ, ಯೋಚಿಸಿದಲ್ಲಿ ಉತ್ತಮ ಫಲಿತಾಂಶ ಹೊಂದಬಹುದೆಂಬುದನ್ನು ಮನಗಂಡು ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಮತ್ತು ಜಿಲ್ಲಾ ಮುಖ್ಯ ಆಯುಕ್ತರು, ಮೈಸೂರು ಮತ್ತು ಅವರ ಸಂಸ್ಥೆಗಳವರ ಸಲಹೆ, ಸಹಕಾರ ಮತ್ತು ಆತಿಥ್ಯದೊಂದಿಗೆ ಏಪ್ರಿಲ್ 26 ರಿಂದ 28ರ ವರೆಗೆ ವಿದ್ಯಾವರ್ಧಕ ತಾಂತ್ರಿಕ ಶಿಕ್ಷಣ ಸಂಸ್ಥೆ, ಮೈಸೂರು ಇಲ್ಲಿ ಏರ್ಪಟ್ಟ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕದ ಆಯ್ದ ಪದಾಧಿಕಾರಿಗಳು ಮತ್ತು ಅಧಿಕಾರಿಗಳೊಂದಿಗೆ ಏರ್ಪಟ್ಟ ಸಮಾಲೋಚನಾ ಸಭೆ ಬಹಳ ಅರ್ಥಪೂರ್ಣವಾಗಿ ಮಹತ್ವದಾಯಕವಾಗಿ ಪರಿಣಮಿಸಿರುವುದು ಹರ್ಷದಾಯಕ. ಈ ಸಭೆಯಲ್ಲಿ ಸಂಸ್ಥೆಯ 6 ದಿಕ್ಸೂಚಿ ಅಂಶಗಳಾದ **(Strategic Priorities),** ಕಾರ್ಯತಂತ್ರ ಪ್ರಮುಖ್ಯತೆಗಳು **Youth Programme,** (ಯುವಜನ ಕಾರ್ಯಕ್ರಮ), **Adult Resources Management** (ವಯಸ್ಕ ಸಂಪನ್ಮೂಲ), **Management** (ಆಡಳಿತ) **Finance** (ಆರ್ಥಿಕ), **Communication & Publication** (ಸಂವಹನ ಮತ್ತು ಪ್ರಸಾರ), **Growth** (ಗಣತಿ) ಗಳೊಂದಿಗೆ ಸಂಸ್ಥೆಯ ಸರ್ವಾಂಗೀಣ ಬೆಳವಣಿಗೆ ಬಗ್ಗೆ ಸುದೀರ್ಘವಾಗಿ ಚಿಂತನ–ಮಂಥನ ಮಾಡಿ ಈಗಾಗಲೇ ನಿರ್ವಹಿಸುತ್ತಿದ್ದ ಕಾರ್ಯಕ್ರಮಗಳ ಕಾರ್ಯಚಟುವಟಿಕೆಗಳ ಸಾಧಕ–ಬಾಧಕಗಳನ್ನು ಅವಲೋಕಿಸಿ ಮುಂಬರುವ ವರ್ಷಗಳಲ್ಲಿ ಅವುಗಳು ಇನ್ನೂ ಹೆಚ್ಚು ಫಲಪ್ರದವಾಗಿ ನಿರ್ವಹಣೆ ಆಗುವಲ್ಲಿ ಹೊಸ–ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಗತಿಪಥದಲ್ಲಿ ಮುನ್ನಡೆಯುವಲ್ಲಿ ತೀರ್ಮಾನಿಸಿರುವುದು ಭಾಗಿದಾರರೆಲ್ಲರಿಗೂ ಹರ್ಷವನ್ನುಂಟುಮಾಡಿತು.

ಮೇಲ್ಕಂಡಂತೆ ಕ್ರಮವಹಿಸಿ ನಿರ್ಧರಿಸಿದ ಯೋಜನೆ–ಯೋಚನೆಗಳನ್ನು ಸಕ್ರಿಯಗೊಳಿಸಿ 2025–26ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವಲ್ಲಿ ಹೆಚ್ಚು ಸಲಹೆ, ಸಹಕಾರ ಹೊಂದಲು ಏಪ್ರಿಲ್ 29 ರಿಂದ ಮೇ 21ರ ವರೆಗೆ 12ಕ್ಕೂ ಹೆಚ್ಚು ಸಂಸ್ಥೆಯ ವಿವಿಧ ಕಾರ್ಯಕ್ರಮ, ಚಟುವಟಿಕೆ, ತರಬೇತಿಗೆ ಸಂಬಂಧಿಸಿದ ಸಮಿತಿಯ ಸಭೆಗಳನ್ನು ಏರ್ಪಡಿಸಿ, ಅವರೆಲ್ಲರ ಸಲಹೆ, ಸಹಕಾರದೊಂದಿಗೆ 2025–26ನೇ ಸಾಲಿನಲ್ಲಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಅರ್ಥಗರ್ಭಿತವಾಗಿ ಭಾಗೀದಾರರುಗಳ ಎಲ್ಲರ ಸಲಹೆ, ಸಹಕಾರಗಳೊಂದಿಗೆ ನಿರ್ವಹಣೆ ಆಗುವಲ್ಲಿ ರಾಜ್ಯ ಮುಖ್ಯ ಆಯುಕ್ತರ ಅವಿರತ ಶ್ರಮದ ಕೈಂಕರ್ಯ **Democratic style of leadership**ಗೆ ದ್ಯೋತಕ ಆಗಿರುವುದು ಮೇಲ್ಕಂಡಂತೆ ಬಹಳಷ್ಟು ಶ್ರಮವಹಿಸಿ ನಿರ್ಧರಿಸಿರುವ ಮತ್ತು ಮೇ 21, 2025ರಲ್ಲಿ ಏರ್ಪಟ್ಟ ರಾಜ್ಯ ಕಾರ್ಯಕಾರಿ ಸಮಿತಿಯ ತೀರ್ಮಾನಗಳಂತೆ ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು 2025–26ನೇ ಸಾಲಿನಲ್ಲಿ ಸಕ್ರಿಯವಾಗಿ ಅನುಷ್ಠಾನಗೊಳಿಸಿ ಯಶಸ್ಸನ್ನು ಹೊಂದುವಲ್ಲಿ ಸರ್ವರೂ ಸಹಕರಿಸಬೇಕಾಗಿ ವಿನಂತಿಸುತ್ತೇನೆ.

ಏಪ್ರಿಲ್, ಮೇ 2025ರಲ್ಲಿ ನಿರ್ವಹಣೆ ಆಗಿರುವ ರಾಜ್ಯ / ಜಿಲ್ಲಾ ಮಟ್ಟದಲ್ಲಿಯ ಎಲ್ಲಾ ಕಾರ್ಯಚಟುವಟಿಕೆಗಳೂ, ತರಬೇತಿಗಳು ಮಾನ್ಯ ರಾಜ್ಯ ಮುಖ್ಯ ಆಯುಕ್ತರ ಸಲಹೆ, ಸಹಕಾರ ಮತ್ತು ಅಭಿಲಾಷೆ ಮೇರೆಗೆ ಸಂಸ್ಥೆಗೆ ಹೊರೆ ಆಗದಂತೆ ದಾನಿಗಳಿಂದ ಪಡೆದ ಹಣ, ಆಹಾರ ಸಾಮಗ್ರಿಗಳು ಮತ್ತು ಇತರೆಯವರ ಸಹಕಾರಗಳಿಂದ ಆಗಿರುವುದು ಎಂಬುದನ್ನು ತಿಳಿಸಲು ಹರ್ಷಿಸುತ್ತಾ, ಈ ಚಳವಳಿಯ ಯಶಸ್ವಿ ಅನುಷ್ಟಾನದಲ್ಲಿ ಸರ್ವರೂ ತಮ್ಮ ಕೈಲಾದ ಸಲಹೆ, ಸಹಕಾರ ನೀಡಿ, ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ.

ಇಂಡಿಯಾ–ಪಾಕಿಸ್ತಾನದ ಇಂದಿನ ಯುದ್ಧ ಪರಿಸ್ಥಿತಿಯ ಹಿನ್ನೆಲೆಯ ತುರ್ತುಸಂದರ್ಭದ ಹಿನ್ನೆಲೆಯಲ್ಲಿ ನಾವೆಲ್ಲರೂ ಸದಾ ಸಿದ್ಧರಾಗಿದ್ದು ಸಕಾಲದಲ್ಲಿ ಸಮರ್ಪಕವಾಗಿ ನಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಕ್ರಮಗಳನ್ನು ಕೈಗೊಳ್ಳಬೇಕಾಗಿದ್ದು ಆ ಬಗ್ಗೆಯ ಸುತ್ತೋಲೆಯನ್ನು ಈಗಾಗಲೇ ಕಳುಹಿಸಿದ್ದು ಅದರಂತೆ ಕ್ರಮಗಳನ್ನು ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

ಏಪ್ರಿಲ್ ಮತ್ತು ಮೇ 2025ರಲ್ಲಿ ರಾಜ್ಯ ಸಂಸ್ಥೆಯಿಂದ ಯಾವುದೇ ಆರ್ಥಿಕ ನೆರವು ಇಲ್ಲದೆ ಎಲ್ಲಾ ಜಿಲ್ಲೆಗಳಲ್ಲೂ ಬೇಸಿಗೆ ಶಿಬಿರಗಳನ್ನು ಅರ್ಥಗರ್ಭಿತವಾಗಿ ಏರ್ಪಡಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳೊಂದಿಗೆ ವಿದ್ಯಾರ್ಥಿಗಳು ಹರ್ಷದಿಂದ ಭಾಗವಹಿಸಿ ಯಶಸ್ವಿಹೊಂದುವಲ್ಲಿ ಶ್ರಮಿಸಿದ ಸರ್ವರಿಗೂ ಅನಂತಾನಂತ ಅಭಿನಂದನೆಗಳು.

ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಅನುಷ್ಠಾನವು ವಿದ್ಯಾರ್ಥಿಗಳು "ಪ್ರವೇಶ"ದಿಂದ ರಾಜ್ಯಪುರಸ್ಕಾರ ರಾಷ್ಟ್ರಪತಿ ಪುರಸ್ಕಾರದವರೆಗಿನ ವಿವಿಧ ಚಟುವಟಿಕೆಗಳ ಪ್ರಗತಿಪರ ಹಾಗೂ ಉತ್ತೇಜಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಅದರಲ್ಲಿ ಹೊಂದಿರುವ ವಿಶಿಷ್ಠ ಅನುಭವ, ಪ್ರೇರಣೆ ಮತ್ತು ಜ್ಞಾನವನ್ನು ಅವಲಂಭಿಸಿರುವುದು, ಅದನ್ನು ನೀಡುವಲ್ಲಿ ದಳನಾಯಕರಿಂದ ಎಲ್ಲಾ ಹಂತದ ವಯಸ್ಕನಾಯಕರುಗಳು ವಿವಿಧ ಹಂತದ ಸಂಸ್ಥೆಗಳ ಪದಾಧಿಕಾರಿಗಳು ಹೆಚ್ಚು ಸಕ್ರಿಯ ಕ್ರಮಕೈಗೊಂಡು ನಿರ್ವಹಿಸುವಂತಾಗುವಲ್ಲಿ ಕ್ರಮವಹಿಸಲು ತೀರ್ಮಾನಿಸಿರುವುದು ಹರ್ಷದಾಯಕ.

ಪ್ರತಿ ತಿಂಗಳಿನಲ್ಲೂ ರಾಷ್ಟ್ರೀಯ, ರಾಜ್ಯಮಟ್ಟದ ದಿನಾಚರಣೆಗಳನ್ನು ಏರ್ಪಡಿಸುವಲ್ಲಿ, ವಿಶೇಷ ವಿಷಯಗಳ ಬಗ್ಗೆಯ ಆಚರಣೆಗಳನ್ನು ನಿರ್ವಹಿಸುವಲ್ಲಿ ತೀರ್ಮಾನಿಸಿರುವುದು ಸರಿಯಷ್ಟೆ. ಈ ವಿಶೇಷ ದಿನಾಚರಣೆಗಳ ವಿಷಯಗಳ ಬಗ್ಗೆ ತಜ್ಞರು, ಹೆಚ್ಚು ಮಾಹಿತಿ ಹೊಂದಿರುವವರು ಒಂದೆರಡು ಪುಟಗಳ **Article**ನ್ನು ಪೂರ್ವಭಾವಿಯಾಗಿ ನೀಡಿದಲ್ಲಿ ಅದನ್ನು ಪರಿಶೀಲಿಸಿ ನಮ್ಮ ಸಂಸ್ಥೆಯ ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸುವಲ್ಲಿ ಕ್ರಮವಹಿಸಲಾಗುವುದೆಂದು ತೀರ್ಮಾನಿಸಿರುವುದನ್ನು ಅವಗಾಹನೆಗೆ ಸಲ್ಲಿಸುತ್ತಾ, ಈ ಬಗ್ಗೆ ಆಸಕ್ತಿಉಳ್ಳವರು ತಮ್ಮ ಲೇಖನವನ್ನು ಕಳುಹಿಸಿ ಪ್ರೋತ್ಸಾಹಿಸಬೇಕಾಗಿ ಸಂಸ್ಥೆಯ ಪರವಾಗಿ ವಿನಂತಿಸುತ್ತೇನೆ.

ಒಟ್ಟಿನಲ್ಲಿ ಮೇ 2025ರ ಕಾರ್ಯಕ್ರಮ, ಚಟುವಟಿಕೆ, ತರಬೇತಿ ಮತ್ತು ವಿಶೇಷವಾಗಿ ವಿವಿಧ ಸಮಿತಿಯ ಸಭೆಗಳು ಆದರ್ಶಪ್ರಾಯವಾಗಿ, ಅರ್ಥಗರ್ಭಿತವಾಗಿ ನಿರ್ವಹಣೆ ಆಗಿದ್ದು, ಅವುಗಳ ಯಶಸ್ಸಿನಲ್ಲಿ ಸಲಹೆ, ಸಹಕಾರನೀಡಿ ಪ್ರೊತ್ಸಾಹಿಸಿದ ಸರ್ವರಿಗೂ ಮತ್ತೊಮ್ಮೆ ಅನಂತಾನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಸ್ಥಳೀಯ/ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳ, ಜಂಟಿ ಕಾರ್ಯದರ್ಶಿಗಳ ಮತ್ತು ಸಹಾಯಕ ಕಾರ್ಯದರ್ಶಿಗಳ ರಾಜ್ಯ ಮಟ್ಟದ ತರಬೇತಿ ಶಿಬಿರ ಮತ್ತು ದಳನಾಯಕ-ನಾಯಕಿಯರ ಗಾಯನ ತರಬೇತಿ ಶಿಬಿರ

ಮೇ 06 ರಿಂದ 08ರವರೆಗೆ, ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಸ್ಥಳೀಯ/ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳ, ಜಂಟಿ ಕಾರ್ಯದರ್ಶಿಗಳ ಮತ್ತು ಸಹಾಯಕ ಕಾರ್ಯದರ್ಶಿಗಳ ರಾಜ್ಯ ಮಟ್ಟದ ತರಬೇತಿ ಶಿಬಿರ ಮತ್ತು ದಳನಾಯಕ-ನಾಯಕಿಯರ ಗಾಯನ ತರಬೇತಿ ಶಿಬಿರಗಳನ್ನು ರಾಜ್ಯ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿತ್ತು.

38 ಶಿಬಿರಾರ್ಥಿಗಳು ಭಾಗವಹಿಸಿದ ಕಾರ್ಯದರ್ಶಿಗಳ ತರಬೇತಿಗೆ ಶ್ರೀ ಹೆಚ್.ಬಿ ಭರಶೆಟ್ಟಿ ಎಲ್.ಟಿ (ಸ್ಕೌಟ್) ರವರು ನಾಯಕರಾಗಿ, 19 ಶಿಬಿರಾರ್ಥಿಗಳು ಭಾಗವಹಿಸಿದ ಗಾಯನ ತರಬೇತಿ ಶಿಬಿರಕ್ಕೆ ಶ್ರೀ ಸಿ.ಎಮ್. ಕೆಂಗಾರ ಎ.ಎಲ್.ಟಿ (ಸ್ಕೌಟ್) ರವರು ನಾಯಕರಾಗಿ ಕಾರ್ಯನಿರ್ವಹಿಸಿದರು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ (ಸ್ಕೌಟ್) ಮತ್ತು ಎ.ಎಸ್.ಸಿ (ಸ್ಕೌಟ್), ಶ್ರೀ ಎಮ್.ಎ ಚೆಲ್ಲಯ್ಯ, ಬಿಬಿಎಮ್‌ಪಿ ಪ್ರೋಗ್ರಾಮ್ ಅಡ್ವೈಜರ್, ಶ್ರೀ ನಾಗೇಶ್. ಆರ್, ಶಿವಪೂರ್ ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್), ಶ್ರೀಮತಿ ಕೆ.ವಿ ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್), ಶ್ರೀಮತಿ ಮಂಜುಳಾ. ಸಿ, ರಾಜ್ಯ ಸಂಘಟನಾ ಆಯುಕ್ತರು (ಗೈಡ್), ಶ್ರೀಮತಿ ಕುಮಾರಿ ಹೊನ್ನಮ್ಮ, ಇನ್‌ಚಾರ್ಜ್ ಪರೀಕ್ಷಾ ವಿಭಾಗ, ಶ್ರೀ ಎಫ್.ಬಿ ಕಣವಿ, ಸ್ಕೌಟರ್, ಶ್ರೀ ಬಸವರಾಜ ಗೊರವರ, ಸ್ಕೌಟರ್, ಶ್ರೀ ರಾಘವೇಂದ್ರ ಸ್ಕೌಟರ್, ಶ್ರೀ ಶ್ರೀನಿಧಿ ಗ್ರೋತ್ ಕೋ-ಆರ್ಡಿನೇಟರ್ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರು ಮೇ 07 ರಂದು ಸಮಾರೋಪ ಸಮಾರಂಭಕ್ಕೆ ಆಗಮಿಸಿ, ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ, ಭಾಗವಹಿಸಿದ ಶಿಬಿರಾರ್ಥಿಗಳೆಲ್ಲರನ್ನು ಉದ್ದೇಶಿಸಿ ಮಾತನಾಡಿದರು.

ಮೇ 08 ರಂದು ಬೆಳಿಗ್ಗೆ ಸರ್ವಧರ್ಮ ಪ್ರಾರ್ಥನೆ ಕಾರ್ಯಕ್ರಮ ಜರುಗಿತು. ಮಧ್ಯಾಹ್ನ ಮುಕ್ತ ಚರ್ಚೆ. ಮೌಲ್ಯಮಾಪನ, ಧ್ವಜ ಅವರೋಹಣ ಮಾಡಿ ರಾಷ್ಟ್ರಗೀತೆ ಹೇಳುವುದರೊಂದಿಗೆ ಶಿಬಿರಗಳನ್ನು ಮುಕ್ತಾಯಗೊಳಿಸಲಾಯಿತು.





# ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ
# ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ




ಮೇ 14 ರಿಂದ 20ರ ವರೆಗೆ, ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳವರ ರಾಜ್ಯ ಮಟ್ಟದ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳನ್ನು ರಾಜ್ಯ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿತ್ತು.

ರೋವರ್ ಸ್ಕೌಟ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 27 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ನಾಗೇಶ್ ಆರ್. ಶಿವಪುರ ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್) ಶಿಬಿರದ ನಾಯಕರಾಗಿದ್ದರು. ರೋವರ್ ಸ್ಕೌಟ್ ಲೀಡರ್ ಮುಂದುವರೆದ ತರಬೇತಿ ಶಿಬಿರದಲ್ಲಿ 13 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀ ಗಣಪತಿ ಎಮ್., ಎಲ್.ಟಿ (ರೋವರ್) ಶಿಬಿರದ ನಾಯಕರಾಗಿದ್ದರು. ರೇಂಜರ್ ಲೀಡರ್ ಮೂಲ ತರಬೇತಿ ಶಿಬಿರದಲ್ಲಿ 32 ಶಿಬಿರಾರ್ಥಿಗಳು ಭಾಗವಹಿಸಿದ್ದು. ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್) ಶಿಬಿರದ ನಾಯಕಿಯಾಗಿದ್ದರು. ರೇಂಜರ್ ಲೀಡರ್ ಮುಂದುವರೆದ ತರಬೇತಿ ಶಿಬಿರದಲ್ಲಿ 6 ಶಿಬಿರಾರ್ಥಿಗಳು ಭಾಗವಹಿಸಿದ್ದು, ಶ್ರೀಮತಿ ಬಿ.ವಿ. ರಾಮಲತಾ, ಎಲ್.ಟಿ (ರೇ) ಶಿಬಿರದ ನಾಯಕಿಯಾಗಿದ್ದರು. ಸಹಾಯಕರಾಗಿ ಶ್ರೀ ವಿ.ಎ ಸಾತಪುತೆ, ಡಾ. ಸಂತೋಷ ಹುಗ್ಗಿ, ಶ್ರೀ ರವಿ ಬಿ.ಆರ್, ಶ್ರೀ ನಟರಾಜ ಜಿ.ಆರ್, ಶ್ರೀ ಆರ್. ರಾಘವೇಂದ್ರ, ಶ್ರೀ ವಿಷ್ಣುಪ್ರಸಾದ, ಶ್ರೀ ವೈ. ನರಸಿಂಹ, ಶ್ರೀಮತಿ ಭಾರತಿ ಡಯಾಸ್, ಡಾ. ಗೀತಾ, ಶ್ರೀಮತಿ ಲತಾ ಮಂಜುನಾಥ್, ಶ್ರೀಮತಿ ಮಲ್ಲೇಶ್ವರಿ ಜೂಜಾರೆ ಇವರು ಕಾರ್ಯನಿರ್ವಹಿಸಿದರು.

ಮೇ 14 ರಂದು ಮಧ್ಯಾಹ್ನ ಪ್ರಾರ್ಥನೆ ಮತ್ತು ಧ್ವಜಾರೋಹಣ ಸಮಾರಂಭದೊಂದಿಗೆ ತರಬೇತಿ ಶಿಬಿರಗಳು ಪ್ರಾರಂಭಗೊಂಡವು. **S.O.T** ಪ್ರಕಾರ ಮೂಲ ಮತ್ತು ಮುಂದುವರೆದ ತರಬೇತಿಯನ್ನು ನಡೆಸಲಾಯಿತು. ಮೇ 16 ರಂದು ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ (ಸ್ಕೌಟ್), ಸಹಾಯಕ ರಾಜ್ಯ ಆಯುಕ್ತರು (ತರಬೇತಿ) ಇವರು ಆಗಮಿಸಿ ಪ್ರೋಗ್ರಾಮ್ ಪ್ಲಾನಿಂಗ್ ವಿಷಯ ಭೋಧನೆಯನ್ನು ಮಾಡಿದರು.

ಮೇ 18 ರಂದು ಹೊರಸಂಚಾರ ಕಾರ್ಯಕ್ರಮವನ್ನು ಶಿಬಿರಾರ್ಥಿಗಳು ಕೈಗೊಂಡರು. ಮೇ 19 ರಂದು ಸಂಜೆ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ನಡೆಸಲಾಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ಉದ್ಘಾಟಿಸಿದರು. ಶ್ರೀ ಬಿ.ಕೆ ಬಸವರಾಜ್, ಶ್ರೀ ಎಂ.ಎ. ಚೆಲ್ಲಯ್ಯ, ರಾಜ್ಯ ಪದಾಧಿಕಾರಿಗಳು ಉಪಸ್ಥಿತರಿದ್ದು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಮೇ 20 ರಂದು ಬೆಳಿಗ್ಗೆ 07.00 ಗಂಟೆಗೆ ಸರ್ವಧರ್ಮ ಪ್ರಾರ್ಥನಾ ಸಮಾರಂಭವು ಶ್ರೀ ಬಿ.ಕೆ ಬಸವರಾಜ್, ಎ.ಎಸ್.ಸಿ (ಸ್ಕೌಟ್) ಮೈಸೂರು ವಿಭಾಗ ಇವರ ಉಪಸ್ಥಿತಿಯಲ್ಲಿ ಜರುಗಿತು. ಬೆಳಿಗ್ಗೆ 09.30 ಗಂಟೆಗೆ ಸಮಾರೋಪ ಸಮಾರಂಭವು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಯುತರು ತರಬೇತಿ ಮಹತ್ವದ ಬಗ್ಗೆ ಹಾಗೂ ತರಬೇತುದಾರರು ಮತ್ತು ಶಿಬಿರಾರ್ಥಿಗಳು ಮಾಡಬೇಕಾದ ಕರ್ತವ್ಯಗಳ ಬಗ್ಗೆ ತಿಳಿಸಿ ಯುವ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಲು ಕರೆ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಎಂ.ಎ ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಶ್ರೀ ಎನ್ ಶ್ರೀನಿವಾಸನ್, ಎಲ್.ಟಿ (ಸ್ಕೌಟ್), ಸಹಾಯಕ ರಾಜ್ಯ ಆಯುಕ್ತರು, ಶ್ರೀಮತಿ ರಾಧಾ ವೆಂಕಟೇಶ್, ಎ.ಎಸ್.ಸಿ (ಗೈಡ್) ಇವರು ಉಪಸ್ಥಿತರಿದ್ದು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.






# ರಾಜ್ಯ ಮಟ್ಟದ ರೋವರ್-ರೇಂಜರ್ ಕೌಶಲ್ಯ ತರಬೇತಿ ಮತ್ತು ಸೇವಾ ಶಿಬಿರ



ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ ಇಲ್ಲಿ ಏಪ್ರಿಲ್ 23 ರಿಂದ 27ರ ವರಿಗೆ ರಾಜ್ಯ ಮಟ್ಟದ ಕೌಶಲ್ಯ ತರಬೇತಿ ಮತ್ತು ಸೇವಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ತರಬೇತಿ ಕೇಂದ್ರದ ಮುಖ್ಯದ್ವಾರ, ಶಿಬಿರಾಗ್ನಿ ವೃತ್ತ, ಶಿಬಿರ ಕೇಂದ್ರದ ಎಲ್ಲಾ ಕಟ್ಟಡಗಳ ಸುತ್ತ ಮುತ್ತ(ಕಂಠೀರವ ಭವನ, ಬೇಡನ್ ಪೊವೆಲ್ ಭವನ, ಗಾಂಧೀ ಭವನ, ಕೊಂಡಜ್ಜಿ ಬಸಪ್ಪ ಭವನ, ಕಛೇರಿ, ನಿಜಲಿಂಗಪ್ಪ ಭವನ, ಬಹುಉಪಯೋಗಿ ಸಮುದಾಯ ಭವನ, ಕಂಪ್ಯೂಟರ್ ಭವನ, ಹಳೇ ಅಡುಗೆ ಮನೆ, ವಿ.ಪಿ.ದೀನದಯಾಳು ಭವನ, ಸೇಲ್ವಿದಾಸ್ ಅಡುಗೆಮನೆ,) ಎಲ್ಲಾ ಟೆಂಟ್‌ಬೇಸ್‌ಗಳ ಸುತ್ತ ಮುತ್ತ (ಶೂಟಿಂಗ್ ರೇಂಜ್, ಮೇಫ್‌ಕಿಂಗ್, ಸಿಯೋನಿ ಪಾರ್ಕ್, ಪಂಚವಟಿ, ಕೋಕೊನೇಟ್, ವೃತ್ತ, ಮ್ಯಾಂಗೋ ವೃತ್ತ ಮತ್ತು ಶೌಚಾಲಯ ಸುತ್ತ ಮುತ್ತ) ವಾಚಿಂಗ್ ಟವರ್, ಹಾಗೂ ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸಲಾಯಿತು.

ಪ್ಲಾಸ್ಟಿಕ್ ವಸ್ತುಗಳನ್ನು ಸಂಗ್ರಹಿಸಿ ನಗರಸಭೆ ರವರಿಗೆ ಹಸ್ತಾಂತರಿಸಲಾಯಿತು. ಶಿಬಿರ ಕೇಂದ್ರದಲ್ಲಿ  ಇರುವಂತಹ 184 ಗ್ರೌಂಡ್ ಶೀಟ್ (ನೆಲ ಹಾಸು ಹೊದಿಕೆ) ಸಂಪೂರ್ಣವಾಗಿ ಸ್ವಚ್ಚತೆ ಮಾಡಲಾಯಿತ್ತು ಹಾಗೂ ಜೆ.ಸಿ.ಬಿ ಮೂಲಕ ಶೇಕಡಾ 45 ರಷ್ಟು ಸಮತಟ್ಟು ಮಾಡಿಸಲಾಯಿತು. ಶಿಬಿರದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಕೌಶಲ್ಯ ತರಬೇತಿ ಸಹ ನೀಡಲಾಯಿತು.

ಏಪ್ರಿಲ್ 25 ರಂದು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರು ವಹಿಸಿ ಮಾತನಾಡಿ ಶಿಬಿರದಲ್ಲಿ ಭಾಗವಹಿಸಿ ಉತ್ತಮ ಯಶಸ್ವಿಗೊಳಿಸಿದ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಬಿ.ವಿ ರಾಮಲತಾ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀ ನಾಗರಾಜು, ಜಿಲ್ಲಾ ಮುಖ್ಯ ಆಯುಕ್ತರು, ಬೆಂಗಳೂರು ಗ್ರಾಮಾಂತರ, ಶ್ರೀ ಎಲ್.ಟಿ ಲೋಕೇಶ್, ಸಹಾಯಕ ಕಾರ್ಯದರ್ಶಿ, ಶ್ರೀಮತಿ ಮಂಜುಳ. ಸಿ, ರಾಜ್ಯ ಸಂಘಟನಾ ಆಯುಕ್ತರು (ಗೈಡ್) ಹಾಗೂ ಶಿಬಿರದ ನಾಯಕರಾದ ಶ್ರೀ ಚಂದ್ರು .ಪಿ, ಭಾಗವಹಿಸಿದ್ದರು.

ಏಪ್ರಿಲ್ 26 ರಂದು ರಾತ್ರಿ 8.30 ರಿಂದ 9.30 ಗಂಟೆಯವರೆಗೆ ಕಾಶ್ಮೀರ ಪಹಲ್ಗಾಂ ನಲ್ಲಿ ಭಯೋತ್ಪಾದ ಕೃತದಲ್ಲಿ ಉಗ್ರರ ದಾಳಿಯಿಂದ ಮೃತರಾದ ಭಾರತದ ನಾಗರೀಕರಿಗೆ ಮೇಣದಬತ್ತಿ ಬೆಳಗಿಸಿ ಗೌರವ ಶ್ರದ್ಧಾಂಜಲಿ ಅರ್ಪಿಸಲಾಯಿತ್ತು.









# ರಾಜ್ಯ ಸಂಸ್ಥೆಯಿಂದ ನಡೆದ ಸಭೆಗಳು



*ಏಪ್ರಿಲ್ 26 ರಂದು ರಾಜ್ಯ ಸಂಸ್ಥೆಯ **2025–26ನೇ ಸಾಲಿನ ಕಾರ್ಯಕ್ರಮ ತರಬೇತಿ, ಯೋಜನೆಗಳ** ಬಗ್ಗೆ ಚರ್ಚಿಸಲು ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ಸಭೆಯನ್ನು ಸಂಘಟಿಸಲಾಯಿತು. ಸಭೆಯಲ್ಲಿ 2025–26ನೇ ಸಾಲಿನಲ್ಲಿ ನಡೆಸಬಹುದಾದ ಕಾರ್ಯಕ್ರಮ, ಚಟುವಟಿಕೆ, ತರಬೇತಿಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಕರಡು ಪ್ರತಿಯನ್ನು ಸಿದ್ಧಪಡಿಸಲಾಯಿತು. ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು, ಎಸ್.ಒ.ಸಿ. (ಸ್ಕೌಟ್ ಮತ್ತು ಗೈಡ್), ಎಸ್.ಟಿ.ಸಿ. (ಸ್ಕೌಟ್ ಮತ್ತು ಗೈಡ್), ಎ.ಎಸ್.ಒ.ಸಿ. (ಸ್ಕೌಟ್ ಮತ್ತು ಗೈಡ್), ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದು ಸಭೆಯ ಯಶಸ್ವಿಗೆ ಸಹಕರಿಸಿದರು.

* ಏಪ್ರಿಲ್ 22 ರಂದು ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ದೇಶವಾಸಿಗಳನ್ನು ಉಗ್ರರು ಅಮಾನುಷವಾಗಿ ಹತ್ಯೆ ಮಾಡಿದ್ದರಿಂದ ಇಡೀ ದೇಶವೇ ದುಃಖಿತವಾಗಿದೆ. ಸಂತ್ರಸ್ತ ಕುಟುಂಬದವರ ದುಃಖದೊಂದಿಗೆ ಇಡೀ ದೇಶವೇ ನಿಂತಿದೆ. ರಾಜ್ಯ ಸಂಸ್ಥೆ ಹಾಗೂ ಮೈಸೂರು ಜಿಲ್ಲಾ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ನಾಯಕತ್ವದಲ್ಲಿ ಏಪ್ರಿಲ್ 27 ರಂದು ಸಂಜೆ 7 ರಿಂದ 8 ಗಂಟೆಗಳವರೆಗೆ ಮೈಸೂರಿನ ಗೋಕುಲಂ ಪರಿಸರದಲ್ಲಿ ಕ್ಯಾಂಡಲ್ ಮಾರ್ಚ್ ಮೂಲ ಮೃತರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡ, ಮೈಸೂರು ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಆಯುಕ್ತೆ (ಗೈಡ್), ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್, ರಾಜ್ಯ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಮತ್ತು ಶಿಕ್ಷಕರು ಭಾಗಿಯಾದರು.



* ಮೇ 05 ರಂದು ಕರ್ನಾಟಕ ರಾಜ್ಯ ಸಂಸ್ಥೆಯ ಸಾಮಗ್ರಿ ಮಳಿಗೆಯ ಸಮಿತಿ, **ಪ್ರಕಟಣಾ ಸಮಿತಿ ಮತ್ತು ಮಾಸಪತ್ರಿಕೆ ಸಂಪಾದಕ ಮಂಡಳಿ ಸಭೆಯನ್ನು** ರಾಜ್ಯ ಕೇಂದ್ರ ಕಛೇರಿ, ಬಿ.ಬಿ.ಎಂ.ಪಿ. ಕಟ್ಟಡ, ಶಾಂತಿಗೃಹ, ಬೆಂಗಳೂರು ಇಲ್ಲಿ ನಾಡೋಜ ಡಾ. ಗೊ.ರು. ಚನ್ನಬಸಪ್ಪರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 'ಗೀತಗುಚ್ಛ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.



* ಮೇ 05 ರಂದು ಸೋಮವಾರ ಮಧ್ಯಾಹ್ನ 2.30 ಗಂಟೆಗೆ **ರಾಜ್ಯ ಸಂಸ್ಥೆಯ ಟ್ರಸ್ಟ್ ಸಮಿತಿಯ** ಸಭೆಯನ್ನು ರಾಜ್ಯ ಕೇಂದ್ರ ಕಛೇರಿ, ಬಿ.ಬಿ.ಎಂ.ಪಿ. ಕಟ್ಟಡ, ಶಾಂತಿಗೃಹ, ಬೆಂಗಳೂರು ಇಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ನಾಡೋಜ ಡಾ. ಗೊ.ರು. ಚನ್ನಬಸಪ್ಪರವರು, ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಟ್ರಸ್ಟ್ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.





* **ರಾಜ್ಯ ತರಬೇತಿ ಸಮಿತಿ ಸಭೆಯು** ಮೇ 13 ರಂದು ಬೆಳಿಗ್ಗೆ 11.00 ಗಂಟೆಗೆ ಶಾಂತಿಗೃಹ ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.



* ಕರ್ನಾಟಕ ರಾಜ್ಯ ಸಂಸ್ಥೆಯ **ವಯಸ್ಕ ಸಂಪನ್ಮೂಲ ಸಮಿತಿ ಸಭೆಯು** ಮೇ 13 ರಂದು 3.00 ಗಂಟೆಗೆ ಶಾಂತಿಗೃಹ ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ ಅವರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಯಿತು.

* ಮೇ 14 ರಂದು ಕೇಂದ್ರ ಕಛೇರಿ ಶಾಂತಿಗೃಹ ಬೆಂಗಳೂರಿನಲ್ಲಿ **ರಾಜ್ಯ ಹಣಕಾಸು ಸಮಿತಿ ಸಭೆ** ರಾಜ್ಯ ಕೋಶಾಧಿಕಾರಿ ಶ್ರೀ ಟಿ. ಪ್ರಭಾಕರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮತ್ತು ಇತರ ಪದಾಧಿಕಾರಿಗಳು, ಹಣಕಾಸು ಸಮಿತಿ ಸದಸ್ಯರು ಭಾಗವಹಿಸಿದ್ದರು.



* ಮೇ 15 ರಂದು ರಾಜ್ಯ ಸಂಸ್ಥೆಯ ದಾವಣಗೆರೆ ಜಿಲ್ಲೆ ಕೊಂಡಜ್ಜಿಯಲ್ಲಿ, **ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರದ ಅಭಿವೃದ್ಧಿ ಸಮಿತಿ ಸಭೆ**ಯು ಡಾ. ಕೆ.ಬಿ. ಗುರುಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಶ್ರೀ ಮುರುಘ ರಾಜೇಂದ್ರ ಚಿಗಟೇರಿ, ಶ್ರೀ ಕೆ. ಗಂಗಪ್ಪಗೌಡ ಹಾಗೂ ಇತರ ಪದಾಧಿಕಾರಿಗಳು, ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.



* ಮೇ 16 ರಂದು ಬೆಳಗ್ಗೆ 11.30 ಗಂಟೆಗೆ ರಾಜ್ಯ ಸಂಸ್ಥೆಯ **ರಾಜ್ಯ ಯುವ ಸಮಿತಿ ಸಭೆ**ಯನ್ನು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಕೇಂದ್ರ ಕಚೇರಿ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಆಯುಕ್ತರು (ಗೈಡ್) ಆದ ಶ್ರೀಮತಿ ಗೀತಾನಟರಾಜ್‌ರವರು ದೀಪ ಬೆಳಗುವ ಮೂಲಕ ಸಭೆಯನ್ನು ಉದ್ಘಾಟಿಸಿದರು. ಸಭೆಯಲ್ಲಿ ವಿವಿಧ ಜಿಲ್ಲಾ ಸಂಸ್ಥೆಗಳಿಂದ ಯುವ ಸಮಿತಿ ಸದಸ್ಯರುಗಳು ಭಾಗವಹಿಸಿದ್ದರು.



* ಮೇ 16 ರಂದು ಶುಕ್ರವಾರ ರಾಜ್ಯ ಸಂಸ್ಥೆಯ **ಸಾಮಗ್ರಿ ಮಳಿಗೆಯ ವಿಶೇಷ ಸಮಿತಿ ಸಭೆ**ಯನ್ನು ರಾಜ್ಯ ಕೇಂದ್ರ ಕಛೇರಿ, ಬಿ.ಬಿ.ಎಂ.ಪಿ. ಕಟ್ಟಡ, ಶಾಂತಿಗೃಹ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಹಾಗೂ ಸಾಮಗ್ರಿ ಮಳಿಗೆಯ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.

* ಮೇ 17 ರಂದು ರಾಜ್ಯ ಸಂಸ್ಥೆಯ **ಶಾಂತಿಗೃಹ ಶಿಬಿರಾಭಿವೃದ್ಧಿ ಸಮಿತಿ ಸಭೆ**ಯನ್ನು ಶ್ರೀ ಟಿ. ಪ್ರಭಾಕರ್, ರಾಜ್ಯ ಕೋಶಾಧಿಕಾರಿರವರ ಅಧ್ಯಕ್ಷತೆಯಲ್ಲಿ ರಾಜ್ಯ ಕೇಂದ್ರ ಕಛೇರಿ, ಬಿ.ಬಿ.ಎಂ.ಪಿ. ಕಟ್ಟಡ, ಶಾಂತಿಗೃಹ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಹಾಗೂ ಶಾಂತಿಗೃಹ ಶಿಬಿರಾಭಿವೃದ್ಧಿ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.



* ಮೇ 19 ರಂದು ರಾಜ್ಯ ಸಂಸ್ಥೆಯ **ರಾಜ್ಯ ಕಾರ್ಯಕ್ರಮಗಳ ಸಮಿತಿ ಸಭೆ**ಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ರಾಜ್ಯ ಕೇಂದ್ರ ಕಛೇರಿ, ಬಿ.ಬಿ.ಎಂ.ಪಿ. ಕಟ್ಟಡ, ಶಾಂತಿಗೃಹ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ರಾಜ್ಯ ಕಾರ್ಯಕ್ರಮಗಳ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.



* ಮೇ 21 ರಂದು ರಾಜ್ಯ ಸಂಸ್ಥೆಯ **ರಾಜ್ಯ ಕಾರ್ಯಕಾರಿ ಸಮಿತಿ ಸಭೆ**ಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ರಾಜ್ಯ ಕೇಂದ್ರ ಕಛೇರಿ, ಬಿ.ಬಿ.ಎಂ.ಪಿ ಕಟ್ಟಡ, ಶಾಂತಿಗೃಹ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು. ಸಭೆಯಲ್ಲಿ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು.



ಹಲವಾರು ವರ್ಷಗಳ ಕಾಲ ಗೈಡ್ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ ಹಿರಿಯರಾದ 92 ವರ್ಷ ವಯಸ್ಸಿನ ಶ್ರೀಮತಿ ಲಲಿತಮ್ಮ ರವರು ರಾಜ್ಯ ಕೇಂದ್ರ ಕಚೇರಿಯಲ್ಲಿ ಆಯೋಜಿಸಲಾಗಿದ್ದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಗೆ ಆಗಮಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ವತಿಯಿಂದ ಇವರನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಲಲಿತಮ್ಮ ರವರು ಅವರ ಹಳೆಯ ನೆನಪುಗಳನ್ನು ಹಾಗೂ ಅವರ ಅನುಭವಗಳನ್ನು ಹಂಚಿಕೊಂಡರು.

## ರೋವರ್ಸ್ ಮತ್ತು ರೇಂಜರ್ಸ್‌ಗಳ ರಾಜ್ಯ ಮಟ್ಟದ ಚಾರಣ ಶಿಬಿರ

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಪಂಜ ಸ್ಥಳೀಯ ಸಂಸ್ಥೆ ಹಾಗೂ ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾ ವಿದ್ಯಾಲಯ, ಸುಬ್ರಹ್ಮಣ್ಯ ಇವುಗಳ ಆಶ್ರಯದಲ್ಲಿ ರೋವರ್ಸ್–ರೇಂಜರ್ಸ್‌ಗಳ ರಾಜ್ಯ ಮಟ್ಟದ ಚಾರಣ ಶಿಬಿರವು ಮೇ 09 ರಿಂದ 11ರ ವರೆಗೆ ನಡೆಯಿತು. ಶಿಬಿರದ ಉದ್ಘಾಟನೆಯು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು. ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಗೈಡ್ ಆಯುಕ್ತೆ ಶ್ರೀಮತಿ ವಿಮಲಾ ರಂಗಯ್ಯ, ಕುಮಾರಸ್ವಾಮಿ ವಿದ್ಯಾಲಯದ ಸಂಚಾಲಕ ಹಾಗೂ ಕೆ.ಎಸ್.ಎಸ್. ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಗಣೇಶ್ ನಾಯಕ್, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ .ಕೆ, ಶಿಬಿರ ನಾಯಕರಾದ ಶ್ರೀ ದಾಮೋದರ ನೇರಳ, ಕಾಲೇಜಿನ ರೋವರ್–ರೇಂಜರ್ ಲೀಡರ್‌ಗಳಾದ ಶ್ರೀ ಮನೋಹರ್, ಶ್ರೀ ರಾಮಪ್ರಸಾದ್, ಶ್ರೀಮತಿ ಪ್ರಮೀಳಾ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಾಧವ ಬಿ.ಕೆ. ಸ್ವಾಗತಿಸಿದರು. ದಕ್ಷಿಣ ಕನ್ನಡ, ಜಿಲ್ಲಾ ಸಂಸ್ಥೆಯ ಜಂಟಿ ಕಾರ್ಯದರ್ಶಿ ಶ್ರೀಮತಿ ಜಯವಂತಿ ಸೋನ್ಸ್ ವಂದಿಸಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಉದಯಕುಮಾರ್ ರೈ, ಬಾಳಿಲ ಕಾರ್ಯಕ್ರಮ ನಿರೂಪಿಸಿದರು. ರಾಜ್ಯದ 29 ಜಿಲ್ಲೆಗಳಿಂದ 118 ರೋವರ್ಸ್, 69 ರೇಂಜರ್ಸ್, 40 ಮಂದಿ ಸರ್ವಿಸ್ ರೋವರ್–ರೇಂಜರ್ಸ್, 4 ದಳ ನಾಯಕರುಗಳು, 14 ಮಂದಿ ಶಿಬಿರ ಸಹಾಯಕರು ಒಟ್ಟು 245 ಮಂದಿ ಭಾಗವಹಿಸಿದ್ದರು.

ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮ ಪಂಜ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಾಧವ ಬಿ.ಕೆ. ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾರೋಪ ಕಾರ್ಯಕ್ರಮದ ವಿಶೇಷ ಅಭ್ಯಾಗತರಾಗಿ ಸುಳ್ಯ ವಿಧಾನ ಸಭಾ ಕ್ಷೇತ್ರದ ಶಾಸಕಿ ಕುಮಾರಿ ಭಾಗೀರಥಿ ಮುರುಳ್ಯ, ಸುಬ್ರಹ್ಮಣ್ಯ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಸುಜಾತ ಕಲ್ಲಾಜೆ ಉಪಸ್ಥಿತರಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಗೈಡ್ ಆಯುಕ್ತೆ ಶ್ರೀಮತಿ ವಿಮಲಾ ರಂಗಯ್ಯ ಸ್ವಾಗತಿಸಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರಿ ಭರತ್‌ರಾಜ್ ಕೆ. ವಂದಿಸಿದರು. ಪಂಜ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಉದಯಕುಮಾರ್ ರೈ ಕಾರ್ಯಕ್ರಮ ನಿರೂಪಿಸಿದರು. ಶಿಬಿರ ನಾಯಕ ದಾಮೋದರ ನೇರಳ, ಕಾಲೇಜಿನ ರೋವರ್ ಲೀಡರ್ ಶ್ರೀ ರಾಮ್‌ಪ್ರಸಾದ್ ಉಪಸ್ಥಿತರಿದ್ದರು.



## 2024-25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 90% ಕ್ಕಿಂತ ಹೆಚ್ಚು ಅಂಕಗಳಿಸಿದ ಸ್ಕೌಟ್ಸ್-ಗೈಡ್ಸ್‌ಗಳ



**Sanidhya Rao**
100%-625/625
Excellent English Medium School, Moodabidre, D.K



**Srujanadithya**
99%-624/625
GPUC Sullia, Sullia Post Dakshina Kannada



**Vedanth K.S**
99%-623/625
Rotary English Medium School Sullia, Dakshina kannada



**Prajna Nidwannaya**
99%-623/625
Vivekananda Kannada Medium School, Tenkila Puttur, D.K



**Nandakishor Y.D**
99%-623/625
Morarji Desai Residential School Kolumenahalli, Chikkaballapura



**Yogdeep .B**
99%-623/625
St Philomena's English School Sarjapura, Anekal, Ban'lore East



**Sharon Dsouza**
99%-623/625
Anugraha English Medium School Ujire, Dakshina Kannadat



**Sanskriti M. Biradar**
99%-623/625
KRCES English Medium School Hosur Road, Bailhongal, Belagavi



**Mansi Nayak**
99%-622/625
Sri Bhuvanendra English Medium High School, Udupi



**Pavan R. Bhat**
99%-622/625
St Thomas English Medium School Alangar, Dakshina Kannada



**Manya**
99%-622/625
Alva's English Medium High School Puthige, Moodbidri, D.K



**Laasya Udupa**
99%-622/625
Rotary english medium school Moodbidri, Dakshina Kannada



**K. Shyamala Kamath**
99%-622/625
Sri Vyasa Maharshi Vidya Peetha Kilpady, Mulki, D.K



**Punith H.S**
99%-622/625
St. Josephs High School Chickmagaluru



**N.R. Abhishek**
99%-621/625
Jaycees English Medium High School Hospet, Vijayanagara Dist.



**Harish Badiger**
99%-621/625
Alvas Kannada Medium High School Moodbidre, Dakshina Kannada



**KSHIRAJA .V**
99%-621/625
Alvas Kannada Medium High School Moodbidre, Dakshina Kannada



**Bhoomika H. Puthran**
99%-621/625
Sri Vyasa Maharshi Vidya Peetha Kilpady, Mulki, Dakshina Kannada



**Prajna Gouda**
99%-621/625
Marthoma English Medium School Court Road Honnavar, Karwar



**Shreejith C.H**
99%-621/625
Vivekananda English Medium School, Puttur, D.K



**Pradnya Sheetal Patil**
99%-620/625
Alvas kannada Medium School Puttige, Dakshina Kannada



**Sushmitha .U**
99%-620/625
Sri Siddaganga Composite High school Siddalingeshwara Nagara, Davangere



**Chinmay**
99%-620/625
Alva's English Medium School Puthige Moodbidri, D.K



**Abhiram Bhat D**
99%-620/625
Vittal Jaycees English Medium High School, Basavanagudi, Vittal, D.k



**Aditya Maruti Kanakatri**
99%-620/625
Alvas English Medium High School Puthige, Moodabidre, D.K



**Chirag U Salian**
99%-620/625
Rotary English Medium School
Jyothinagara, Moodbidri, D.K



**Maanyashree M. Nadiger**
99%-619/625
St. Paul's Convent Girls' High School
Davangere, PJ Extension, Davangere



**Yashaswi K.G**
99%-619/625
Rotary High School, Mithadka
Sullia Talq, D.K



**Shashwath G. Shetty**
99%-619/625
Sri Vyasa Maharshi Vidya Peetha
Kilpady, Mukki, D.K



**Pratheeksha D. Shettigar**
99%-619/625
St. Sebastian English Medium
School, Permannur, D.K



**Manya**
99%-619/625
Vani English Medium School
Halekote, Belthangady, D.K



**Sinchana Achar**
99%-619/625
Rotary English Medium School
Moodbidri, D.K



**Pranamya Shetty**
99%-619/625
Rotary English Medium School
Jyothinagar, Moodbidri, D.K



**Ankitha C.S**
99%-619/625
Chirec Public School
Madhugiri



**Srushti Narayan Rente**
99%-619/625
Alva's Kannada Medium High School
Puttige, Moodubidire, D.K



**Aadhyanth Kumbar**
98%-618/625
Alva's Kannada Medium School
Puttige, Moodubidire, D.K



**Dhanalakshmi .R**
98%-618/625
Sacred Children School
Dodda Aladamara, Bengaluru South



**Adishree M. Acharya**
98%-618/625
Christ King English Medium School
Karkala Taluk, Udupi



**Bhavani Shivapur**
98%-618/625
Yadgiri District



**Neston Sonal Gonsalves**
98%-618/625
Rotary English Medium School
Jyothinagar, Moodbidri, D.K



**Hishanth B.V**
98%-618/625
Jnanodaya Bethany PU College
Nellyady, Dakshina Kannada



**Numa Musthak**
98%-618/625
Rotary English Medium School
Moodubidire, D.K



**Ayesha Fathima**
98%-618/625
Gyarahalli Thammayya World
Academy, Lakshmipuram, Hassan



**Dakshin S Salian**
98%-618/625
Thumbay English Medium High
School, Thumbay, Bantwal, D.K.



**Anish I Rai**
98%-618/625
Sudana Residential School
Nehrunagara, Puttur Taluk, D.K



**Bhargavi .S**
98%-618/625
St. Philomena Girls High School
Hassan



**Chinmay Thimmanna Hegde**
98%-618/625
Morarji Desai Residential school
Kalli, Sirsi (Uttar kannada)



**Lavanya P.S**
98%-617/625
Vivekananda English Medium
School, Tenkila Puttur, D.K



**Divya Bhat**
98%-617/625
Sandeepan English Medium School
Khambadakone, Nagoor, Udupi



**Mahima R.K**
98%-617/625
Vittal Jaycees English Medium
High School, Basavanagudi, Vittal
Bantwal, D.Ki



# ಜಿಲ್ಲಾ ವಾರ್ತೆಗಳು

## ಬೆಂಗಳೂರು ದಕ್ಷಿಣ

* ಏಪ್ರಿಲ್ ಮತ್ತು ಮೇ ಮಾಹೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಎಲ್ಲಾ ದಳಗಳ ಮಟ್ಟದಲ್ಲಿ ಕಬ್ಸ್–ಬುಲ್ ಬುಲ್, ಸ್ಕೌಟ್ಸ್–ಗೈಡ್‌ಗಳಿಗೆ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಸ್ಕೌಟ್ಸ್–ಗೈಡ್ಸ್ ಪ್ರಾರ್ಥನೆ, ಧ್ವಜಗೀತೆ, ಪ್ರತಿಜ್ಞೆ, ನಿಯಮ, ಜಂಗಲ್ ಮತ್ತು ತಾರಾ ಸ್ಟೋರಿ, ಆಟದ ಮೂಲಕ ಗಂಟುಗಳನ್ನು ಅಭ್ಯಾಸವನ್ನು ಮಾಡಿಸಲಾಯಿತು, ದಳ ಮಟ್ಟದಲ್ಲಿ ಹೊರಸಂಚಾರವನ್ನು ಹಮ್ಮಿಕೊಳ್ಳಲಾಯಿತು. ಬೇಸಿಗೆ ಶಿಬಿರ ಕೊನೆಯ ದಿನದಂದು ಸರ್ವಧರ್ಮ ಪ್ರಾರ್ಥನೆಯೊಂದಿಗೆ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಬೇಸಿಗೆ ಶಿಬಿರವಕ್ಕೆ ಭೇಟಿ ನೀಡಿ ಮಕ್ಕಳಿಗೆ ಶುಭಕೋರಿದರು.





* ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಏಪ್ರಿಲ್ 10 ರಿಂದ 14ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ಸ್ಕೌಟ್ಸ್–ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2024–25ನೇ ಸಾಲಿನ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್. ಸಿಂದ್ಯಾ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳನ್ನು ಉದ್ದೇಶಿ ಮಾತನಾಡಿದರು. ತೃತೀಯ ಸೋಪಾನ ಸ್ಕೌಟ್ಸ್ ವಿಭಾಕ್ಕೆ ಶ್ರೀ ಸತೀಶ್, ಫ್ರೀ–ಎ.ಎಲ್.ಟಿ.(ಸ್ಕೌ) ನಾಯಕರಾಗಿದ್ದರು. ಗೈಡ್ಸ್ ವಿಭಾಗಕ್ಕೆ ಶ್ರೀಮತಿ ವಿಕ್ಟೋರಿಯಾ ಅಮಲರಾಣಿ ನಾಯಕಿಯಾಗಿದ್ದರು. ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರಕ್ಕೆ ಶ್ರೀ ಚಂದ್ರು ಪಿ.ಎ., ಎಸ್.ಓ.ಸಿ. (ಎಸ್) ನಾಯಕರಾಗಿದ್ದರು. ಶ್ರೀ ಉಷಾ ದಾಮೋಂದರನ್, ಎ.ಎಲ್.ಟಿ. (ಗೈಡ್) ವಿಭಾಗಕ್ಕೆ ನಾಯಕಿಯಾಗಿದರು. ಶ್ರೀ ಟಿ.ಕೆ. ನಾರಾಯಣಸ್ವಾಮಿ, ಎಲ್.ಟಿ. (ಸ್ಕೌ) ಶಿಬಿರದ ನಿರ್ದೇಶಕರಾಗಿದರು. ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು ಶಿಬಿರಕ್ಕೆ ಭೇಟಿ ನೀಡಿದರು. ಶ್ರೀ ಎ.ಎಸ್. ಮದುಸೂದನ್, ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ





ಜಿಲ್ಲೆಯ ಖಜಾಂಚಿ, ದಳನಾಯಕ–ನಾಯಕಿಯರು, ಸ್ಕೌಟ್ಟ್–ಗೈಡ್ಸ್‌ಗಳು, ಸೇವಾ ರೋವರ್ಸ್–ರೇಂಜರ್ಸ್ ಶಿಬಿರದಲ್ಲಿ ಭಾಗವಹಿಸಿದ್ದರು. ಶ್ರೀ ಪಳನಿ, ಜಿಲ್ಲಾ ಆಯುಕ್ತರು (ಸ್ಕೌಟ್ಸ್), ಜಿಲ್ಲಾ ಪದಕ ಕಾರ್ಯದರ್ಶಿಗಳಾದ ಶ್ರೀ ಟಿ. ಸಿದ್ದಗಂಗಯ್ಯ ಪ್ರೀ–ಎ.ಎಲ್.ಟಿ. (ಸ್ಕೌ), ಶ್ರೀಮತಿ ದಾಕ್ಷಯಣಿ ಪ್ರೀ–ಎ.ಎಲ್.ಟಿ. (ಗೈ) ಶಿಬಿರಕ್ಕೆ ಭೇಟಿ ನೀಡಿದರು.

* ಏಪ್ರಿಲ್ 15 ರಿಂದ 21ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಟ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ಬ್ ಮಾಸ್ಟರ್, ಫ್ಲಾಕ್ ಲೀಡರ್ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಯಿತು. ಒಟ್ಟು 8 ಶಿಬಿರದಿಂದ 98 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಸ್ಕೌಟ್ಸ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಟಿ.ಕೆ ನಾರಾಯಣಸ್ವಾಮಿ, ಎಲ್.ಟಿ. (ಸ್ಕೌಟ್ಸ್) ಶಿಬಿರದ ನಾಯಕರಾಗಿದರು, ಗೈಡ್ಸ್ ಕ್ಯಾಪ್ಟನ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಗಾಯತ್ರಿ ಗೌಡ, ಎಲ್.ಟಿ. (ಗೈಡ್ಸ್) ಶಿಬಿರದ ನಾಯಕಿಯಾಗಿದ್ದರು. ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಗೌರಾಬಾಯಿ ಎಲ್.ಟಿ. (ಫ್ಲಾಕ್) ಶಿಬಿರದ ನಾಯಕ/ ಕಿಯಾಗಿದರು. ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ವಾಮನ ಟಿ.ಕೆ., ಎ.ಎಲ್.ಟಿ. (ಕಬ್) ಶಿಬಿರದ ನಾಯಕರಾಗಿದ್ದರು. ಸ್ಕೌಟ್ಸ್ ಮಾಸ್ಟರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀ ಎಂ.ವಿ. ಜನಾರ್ಧನ್, ಎಲ್.ಟಿ. (ಸ್ಕೌಟ್ಸ್) ಶಿಬಿರದ ನಾಯಕರಾಗಿದ್ದರು. ಗೈಡ್ಸ್ ಕ್ಯಾಪ್ಟನ್ ಮೂಲತರಬೇತಿ ಶಿಬಿರಕ್ಕೆ ಶ್ರೀಮತಿ ರೇಖಾ ಎ.ಎಲ್.ಟಿ. (ಗೈಡ್ಸ್) ಶಿಬಿರದ ನಾಯಕಿರಾಗಿದ್ದರು. ಫ್ಲಾಕ್ ಲೀಡರ್ ಮುಂದುವರೆದ ತರಬೇತಿ ಶಿಬಿರಕ್ಕೆ ಶಿಬಿರದ ನಾಯುಕಿರಾಗಿದ್ದರು. ಕಬ್ ಮಾಸ್ಟರ್ ಮುಂದುವರದ ತರಬೇತಿ ಶಿಬಿರಕ್ಕೆ ಶ್ರೀ ಮುನಿನಾರಾಯಣಪ್ಪ ಎಲ್.ಟಿ. (ಕಬ್) ಶಿಬಿರದ ನಾಯಕರಾಗಿದ್ದರು.

ಏಪ್ರಿಲ್ 20 ರಂದು ಗೌರವಾನ್ವಿತ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ತರಬೇತಿ ಶಿಬಿರ ಮುಕ್ತಾಯ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿ ಮಾತನಾಡಿದರು. ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಎಸ್. ಮದುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ಶ್ರೀಮತಿ ವಿಕ್ಟೋರಿಯಾ ಅಮಲರಾಣಿ ಎ.ಎಲ್.ಟಿ. (ಗೈಡ್), ಶ್ರೀ ಟಿ.ಕೆ. ನಾರಾಯಣಸ್ವಾಮಿ ಎಲ್.ಟಿ. (ಸ್ಕೌಟ್ಸ್) ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀಮತಿ ಗಾಯತ್ರಿಗೌಡ ಎಲ್.ಟಿ. (ಗೈಡ್) ಜಿಲ್ಲಾ ತರಬೇತಿ ಆಯುಕ್ತರು (ಗೈ), ಶಿಬಿರ ನಾಯಕರುಗಳು, ಸಹನಾಯಕರುಗಳು, ಶ್ರೀ ಚಂದ್ರು.ಪಿ ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್), ಶಿಬಿರಾರ್ಥಿಗಳು ಮತ್ತು ಸೇವಾ ರೋವರ್ಸ್–ರೇಂಜರಸ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



* The Bharat Scouts and Guides, Bangalore South District Association, in view of any potential or declared war emergency in India, undertook robust preparations to uphold their motto - "Be Prepared" - and stand ready to serve the nation with discipline, skill, and unity.

The Civil Defence Training in turn helped to maximise readiness to engage in addressing all potential circumstances while emphasising commitment to community service. It helped strengthen the rapid response skills of the volunteers with the active support of the Civil Defence Personnel on 10 May 2025 which saw participation of more than 60 rovers, rangers and unit leaders.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಜಿಲ್ಲಾ ಮಟ್ಟದ ಬನ್ನಿ ಅಂಟಿ, ಸ್ಕೌಟ್ಸ್ ಮಾಸ್ಟರ, ಗೈಡ್ ಕ್ಯಾಪ್ಟನ್ ಕಬ್ ಮಾಸ್ಟರ್ ಹಾಗೂ ಫ್ಲಾಕ್ ಲೀಡರ್‌ಗಳ ಪ್ರಾಥಮಿಕ ತರಬೇತಿ ಶಿಬಿರವು ರಾಜ್ಯ ತರಬೇತಿ ಮತ್ತ ಶಿಬಿರ ಕೇಂದ್ರ ಡಾ॥ ಅನ್ನಿಬೆಸೆಂಟ್ ಪಾರ್ಕಿನಲ್ಲಿ ಮೇ 6 ರಿಂದ 12ರವರೆಗೆ ನಡೆಯಿತು. 52 ಶಿಕ್ಷಕ–ಶಿಕ್ಷಕಿಯರು ಶಿಬಿರದಲ್ಲಿ ಭಾಗವಹಿಸಿದ್ದರು.




* ಮೇ 07 ರಂದು ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯಾ ಶಿಬಿರವನ್ನು ಉದ್ಘಾಟಿಸಿ ಶುಭಹಾರೈಸಿದರು. ಉದ್ಘಾಟನಾ ಸಮಾರಂಭದಲ್ಲಿ ಸಹಾಯಕ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ರಾಜ್ಯ ವಯಸ್ಕ ನಾಯಕ ಆಯುಕ್ತೆ ಶ್ರೀಮತಿ ಬಿ.ವಿ. ರಾಮಲತಾ, ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಶಿವಪೂರ್ ಶ್ರೀಮತಿ ಶ್ಯಾಮಲ ಕೆ.ವಿ. ಹಿರಿಯರಾದ ಶ್ರೀ ಎಂ.ಎ. ಚೆಲ್ಲಯ್ಯ, ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಮತ್ತಿತರು ಉಪಸ್ಥಿತರಿದ್ದರು. ಶಿಬಿರದಲ್ಲಿ ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ಬಿ. ಆನಂದ ಅಡಿಗ, ಗೈಡ್ಸ್ ವಿಭಾಗದ ನಾಯಕರಾಗಿ ಶ್ರೀಮತಿ ಜ್ಯೋತಿ ರಂಗನಾಥ್, ಕಬ್ ವಿಭಾಗಕ್ಕೆ ಶ್ರೀಮತಿ ಭಾರತಿ ಚಕ್ರವರ್ತಿ, ಬನ್ನಿ ವಿಭಾಗಕ್ಕೆ ಶ್ರೀಮತಿ ಸುಶೀಲ ಮಹಾದೇವ ಕಾರ್ಯನಿರ್ವಹಿಸಿದರು. ಶಿಬಿರ ಸಮಯದಲ್ಲಿ ಜಿಲ್ಲಾ ಸ್ಕೌಟ್ಸ್ ಆಯುಕ್ತರು ಶ್ರೀ ಹೇಮಂತ್ ಕುಮಾರ್ ಹಾಗೂ ಸತ್ಯಜಿತ್ ಚಟರ್ಜಿ ಜಿಲ್ಲಾ ತರಬೇತಿ ಆಯುಕ್ತರು ಭಾಗವಹಿಸಿ ಶಿಬಿರಾರ್ಥಿಗಳಿಗೆ ಶುಭಾಶಯ ಕೋರಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಡಾ॥ ಅನ್ನಿಬೆಸೆಂಟ್ ಪಾರ್ಕಿನಲ್ಲಿ ಮೇ 07 ರಿಂದ 10ರ ವರೆಗೆ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷೆ ನಡೆಸಲಾಯಿತು. ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ನರೆವೇರಿಸಿದರು. ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ಮೋಹನ್ ಕುಮಾರ್ ಗೈಡ್ಸ್ ವಿಭಾಗದ ನಾಯಕರಾಗಿ ಶ್ರೀಮತಿ ವಿಜಯಲಕ್ಷ್ಮಿ ಇವರು ಕಾರ್ಯನಿರ್ವಹಿಸಿದರು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್–ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 34ನೇ ತಿಂಗಳ ಕಾರ್ಯಕ್ರಮವು ಏಪ್ರಿಲ್ 30 ರಂದು ಗಂಟಿಗಾನಹಳ್ಳಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಳಿಸಲಾಯಿತು. ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಗಿಡಗಳಿಗೆ ನೀರು ಉಣಿಸಲಾಯಿತು ಹಾಗು ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು ಹಾಗು ನಮ್ಮ ಜತೆ ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 45 ಭಾಗವಹಿಸಿದ್ದರು.



* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಅಪರೇಷನ್ ಸಿಂಧೂರ್ ಯಶಸ್ವಿಗೊಳಿಸಿದ ಭಾರತಿಯ ಸೇನೆಗೆ ಹೆಮ್ಮೆಯಿಂದ ಗೌರವಸಲ್ಲಿಸಲಾಯಿತು.

## ಬೀದರ್

* ಜಮ್ಮು–ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ದೇಶವಾಸಿಗಳನ್ನು ಉಗ್ರರು ಅಮಾನುಷವಾಗಿ ಹತ್ಯ ಮಾಡಿದ್ದರಿಂದ ಇಡೀ ದೇಶವೇ ದುಃಖಿತವಾಗಿದೆ. ಸಂತ್ರಸ್ತ ಕುಟುಂಬದವರ ದುಃಖದೊಂದಿಗೆ ಇಡೀ ದೇಶವೇ ನಿಂತಿದೆ. ಈ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾರವರು ಸೂಚನೆಯಂತೆ ಏಪ್ರಿಲ್ 27 ರಂದು ಜಿಲ್ಲಾ ಸಂಸ್ಥೆ ಬೀದರ ಕಾರ್ಯಾಲಯದಿಂದ ಯಲ್ಲಾಲಿಂಗ ಕಾಲೋನಿ ವೃತ್ತದ ವರಗೆ ಕ್ಯಾಂಡಲ್ ಮಾರ್ಚ್ ಮಾಡುವುದುರ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ ಹಾಗೂ ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್–ಗೈಡ್ಸ್, ಪೋಷಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.



## ಚಿಕ್ಕಬಳ್ಳಾಪುರ

* ಮಾರ್ಚ್ 22 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಘಟಕಗಳಲ್ಲಿ ವಿಶ್ವ ಭೂ ದಿನಾಚರಣೆಯನ್ನು (ಅರ್ಥ್ ಡೇ) ಆಚರಿಸಲಾಯಿತು. ವಿದ್ಯಾರ್ಥಿಗಳು ಮತ್ತು ದಳ ನಾಯಕರುಗಳು ರಾಜ್ಯ ಸಂಸ್ಥೆಯ ಮಾರ್ಗದರ್ಶನದಂತೆ ರಾತ್ರಿ 8.30 ರಿಂದ 9.30ರ ವರಿಗೆ ವಿದ್ಯುತ್ ದೀಪಗಳನ್ನು ಆರಿಸಿ ಕ್ಯಾಂಡೆಲ್ ಮತ್ತು ಎಣ್ಣೆ ದೀಪಗಳನ್ನು ಬೆಳಗಿಸಿ ಕುಟುಂಬ ಸದಸ್ಯರುಗಳೊಂದಿಗೆ ಆಚರಿಸಿದರು.

* ಮಾರ್ಚ್ 22 ರಂದು ಚಿಕ್ಕಬಳ್ಳಾಪುರ ಜಿಲ್ಲಾ ಸಂಸ್ಥೆ ವತಿಯಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಿರಿಯಣ್ಣನಹಳ್ಳಿ, ಚಿಕ್ಕಬಳ್ಳಾಪುರ ಇಲ್ಲಿ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮ ಆಚರಿಸಲಾಯಿತು ಮತ್ತು ಗ್ರಾಮದ ವಿವಿಧ ರ್ತಸೆಗಳಲ್ಲಿ ನೀರಿನ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲಾಯಿತು.

* ಮಾರ್ಚ್ 27 ರಿಂದ 31ರ ರವರಿಗೆ ಪಿ.ಎಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೋಮೇನಹಳ್ಳಿ ಗುಡಿಬಂಡೆ ತಾಲ್ಲೂಕು ಇಲ್ಲಿ ಶಾಲಾ ಮಟ್ಟದ ಬೇಸಿಗೆ ಶಿಬಿರ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಸುಮಾರು 120 ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದ್ದರು. ಮುಖ್ಯ ಶಿಕ್ಷಕ ಮತ್ತು ಸ್ಕೌಟ್ ಮಾಸ್ಟರ್ ಶ್ರೀ ನಾಗಲಿಂಗಪ್ಪ, ಗೈಡ್ ಕ್ಯಾಪ್ಟನ್ ಶ್ರೀಮತಿ ರಶ್ಮಿರವರ ನೇತೃತ್ವದಲ್ಲಿ ಶಿಬಿರ ಯಶಸ್ವಿಯಾಗಿ ನಡೆಯಿತು.

* ಏಪ್ರಿಲ್ 02 ರಿಂದ 07ರ ವರಿಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉಚ್ಚೋದನಹಳ್ಳಿ, ಗೌರಿಬಿದನೂರು ತಾಲ್ಲೂಕು ಇಲ್ಲಿ ಸ್ಥಳಿಯ ಸಂಸ್ಥೆ ಕಾರ್ಯದರ್ಶಿ ಶ್ರೀ ವೈ.ಜಿ. ಗಿರಿಧರ್ ಮತ್ತು ಸ್ಕೌಟ್ ಮಾಸ್ಟರ್ ಶ್ರೀ ಕೃಷ್ಣೇಗೌಡರವರ ನೇತೃತ್ವದಲ್ಲಿ ಬೇಸಿಗೆ ಶಿಬಿರ ಆಯೋಜಿಸಲಾಗಿತ್ತು. ಮುಖ್ಯ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ. ಅಧ್ಯಕ್ಷರು ಸಹ ಶಿಕ್ಷಕರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಯಿತು. ಶಿಬಿರದಲ್ಲಿ 50 ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಏಪ್ರಿಲ್ 2 ರಿಂದ 4ರ ವರಿಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತೀಲಕುಂಟಹಳ್ಳಿ ಗುಡಿಬಂಡೆ ತಾಲ್ಲೂಕು ಇಲ್ಲಿ ಮುಖ್ಯ ಶಿಕ್ಷಕರು ಮತ್ತು ಸ್ಕೌಟ್ ಮಾಸ್ಟರ್ ಶ್ರೀ ವಿಜಯ್ ಕುಮಾರ್ ಮತ್ತು ಗೈಡ್ ಕ್ಯಾಪ್ಟನ್ ಉಮಾರವರ ನೇತೃತ್ವದಲ್ಲಿ ನಡೆದ ಬೇಸಿಗೆ ಶಿಬಿರದಲ್ಲಿ ಸುಮಾರು 65 ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಏಪ್ರಿಲ್ 05 ರಿಂದ 09ರ ವರಿಗೆ ಸರ್ಕಾರಿ ಪ್ರೌಢಶಾಲೆ ಮೇಳ್ಯ, ಗೌರಿಬಿದನೂರು ತಾಲ್ಲೂಕು. ಇಲ್ಲಿ ಶಾಲಾ ಹಂತದ ಬೇಸಿಗೆ ಶಿಬಿರವು ಜಿಲ್ಲಾ ತರಬೇತಿ ಆಯುಕ್ತೆ ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಹೆಚ್.ಎನ್. ಲಕ್ಷ್ಮೀರವರ ನೇತೃತ್ವದಲ್ಲಿ ನಡೆಯಿತ್ತು. ಸುಮಾರು 64 ಗೈಡ್ಸ್‌ಗಳು ಭಾಗವಹಿಸಿದ್ದರು.

* ಏಪ್ರಿಲ್ 04 ರಿಂದ ಮೇ 10ರ ವರಿಗೆ ಶ್ರೀ ಅರುಣೋಧಯ ಶಾಲೆ, ಬಾಗೇಪಲ್ಲಿ ಇಲ್ಲಿ ಶಾಲಾ ಮುಖ್ಯ ಶಿಕ್ಷಕರು ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಉಮಾ ಮತ್ತು ಸ್ಕೌಟ್ ಮಾಸ್ಟರ್ ಶ್ರೀ ನರಸಿಂಹಮೂರ್ತಿರವರ ನೇತೃತ್ವದಲ್ಲಿ ಬೇಸಿಗೆ ಶಿಬಿರ ಯಶಸ್ವಿಯಾಗಿ ನಡೆಯಿತು. ಸುಮಾರು 85 ಸ್ಕೌಟ್ಸ್–ಗೈಡ್‌ಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಏಪ್ರಿಲ್ 14 ರಂದು ಬಾಗೇಪಲ್ಲಿ ಅರುಣೋದಯ ಶಾಲೆ ಇಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಬಾಗೇಪಲ್ಲಿ, ಜೈನ್ ಆಸ್ಪತ್ರೆ ಹಾಗೂ ತಾಲ್ಲೂಕು ಆರೋಗ್ಯ ಇಲಾಖೆ ಸಹಯೋಗದಲ್ಲಿ ಉಚಿತ ಆರೋಗ್ಯ ಶಿಬಿರ ಆಯೋಜಿಸಲಾಗಿತು. ಈ ಸಂದರ್ಭದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ, ಡಾ. ಬಿ.ಆರ್. ಅಂಬೇಡ್ಕರ್‌ರವರ 134ನೇ ಜನ್ಮದಿನಾಚರಣೆ ಆಚರಿಸಲಾಯಿತ್ತು ಹಾಗೂ ಸ್ಕೌಟ್ಸ್ ಮತ್ತು ಗೈಡ್‌ಗಳು ಆರೋಗ್ಯ ಶಿಬಿರದಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದರು.



* ಏಪ್ರಿಲ್ 07 ರಂದು ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಮಾನ್ಯ ಉಪನಿರ್ದೇಶಕರ ಸಲಹೆ ಮಾರ್ಗದರ್ಶನದಂತೆ 10 ರೋವರ್ಸ್ ಮತ್ತು 04 ರೇಂಜರ್ಸ್ ವಿದ್ಯಾರ್ಥಿಗಳು ಸೇವೆಯನ್ನು ಸಲ್ಲಿಸಿದರು.

* ಮೇ 07 ರಿಂದ 09ರ ವರಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ರೋವರ್ಸ್–ರೇಂಜರ್ಸ್ ಘಟಕದ ಬೇಸಿಗೆ ಮತ್ತು ವಾರ್ಷಿಕ ಶಿಬಿರ ಆಯೋಜಿಸಲಾಗಿತು. ಕಾಲೇಜಿನ ಪ್ರಾಂಶುಪಾಲರಾದ ಡಾ. ಮುರಳಿ ಆನಂದ್‌ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತ್ತು, ಶ್ರೀ ವಿಶ್ವನಾಥ. ವಿ, ಜಿಲ್ಲಾ ಸಂಘಟಕರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ರೋವರ್–ರೇಂಜರ್ ನೋಡಲ್ ಅಧಿಕಾರಿಗಳಾದ ಡಾ. ರವಿಕುಮಾರ್ ಮತ್ತು ಡಾ. ಗೀರಿಜಾ ಮತ್ತು ರೋವರ್–ರೇಂಜರ್ ಘಟಕದ ನವೀನ್ ಕುಮಾರ್, ನೀತಿನ್, ಗೋಪಾಲ್, ಸೋನಿ, ಭೂಮಿಕ ಮುಂತಾದವರು ಭಾಗವಹಿಸಿದ್ದರು.




* ಮೇ 12 ರಿಂದ 14ರ ವರಿಗೆ ಸರ್ಕಾರಿ ಮಹಿಳಾ ಕಾಲೇಜು ಚಿಂತಾಮಣಿ ಇಲ್ಲಿ ಕಾಲೇಜು ಹಂತದ ಬೇಸಿಗೆ ಶಿಬಿರ ಮತ್ತು ವಾರ್ಷಿಕ ಶಿಬಿರವನ್ನು ಕಾಲೇಜಿನ ಐ.ಕ್ಯೂಎಸ್.ಸಿ. ಸಂಚಾಲಕರಾದ ಶ್ರೀ ಅರವಿಂದ ಉದ್ಘಾಟಿಸಿ ಶುಭಹಾರೈಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ರಮೇಶ್‌ರವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಂಘಟಕ ವಿಶ್ವನಾಥ ವಿ., ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಕೈವಾರ ಬೆಟ್ಟಕ್ಕೆ ಚಾರಣ ಹಮ್ಮಿಕೊಳ್ಳಲಾಯಿತ್ತು. ಈ ಸಂದರ್ಭದಲ್ಲಿ ರೇಂಜರ್ ಘಟಕದ ಸಂಚಾಲಕರಾದ ಶ್ರೀ ಚಿನ್ನತಾಯಮ್ಮರವರು ಶಿಬಿರವನ್ನು ಸಂಘಟಿಸಿದರು. ಕಾಲೇಜಿನ ಹಿರಿಯ ರೇಂಜರ್ಸ್ ವಿದ್ಯಾರ್ಥಿಗಳು ಸುಪ್ರೀಯಾ, ಶಿರೀಷಾ, ಇಂದೂಶ್ರೀ, ಮಾನಸ, ಕಾವ್ಯ ಮುಂತಾದವರು ಉಪಸಿತರಿದ್ದರು.



## ಚಿತ್ರದುರ್ಗ

* 2024–25ನೇ ಸಾಲಿನ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ನಿಪುಣ್ ಪರೀಕ್ಷಾ ಶಿಬಿರವನ್ನು ಏಪ್ರಿಲ್ 24 ರಿಂದ 25ರ ವರೆಗೆ ಶ್ರೀ ಕೇತೇಶ್ವರ ಮಠದಲ್ಲಿ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ರೋವರ್ಸ್ ವಿಭಾಗದಿಂದ 07 ವಿಧ್ಯಾರ್ಥಿಗಳು, ರೇಂಜರ್ಸ್ ವಿಭಾಗದಿಂದ 20 ವಿಧ್ಯಾರ್ಥಿಗಳು ಭಾಗವಹಿಸಿದ್ದರು. ಉದ್ಘಾಟನಾ ಸಮಾರಂಭಕ್ಕೆ ರಾಜ್ಯ ಸಂಸ್ಥೆಯ ಅಜೀವ ಸದಸ್ಯರಾದ ಶ್ರೀ ಹೆಚ್. ಬಸವರಾಜ್, ಜಿಲ್ಲೆಯ ಪದಾಧಿಕಾರಿಗಳಾದ ಶ್ರೀಮತಿ ಸವಿತಾ ಶಿವಕುಮಾರ್ ಗೈಡ್ಸ್ ಆಯುಕ್ತರು,



ಶ್ರೀ ಅನಂತರೆಡ್ಡಿ, ಸ್ಥಾನಿಕ ಆಯುಕ್ತರು, ಸರ್ಕಾರಿ ವಿಜ್ಞಾನ ಕಾಲೇಜು ಪ್ರಾಂಶುಪಾಲರು. ಪ್ರೊ. ಸಿದ್ದರಾಮ ಚೆನ್ನಗೊಂಡ, ಶಿಬಿರದ ನಾಯಕರಾದ ಶ್ರೀ ರಾಜೇಶ್ ವಿ. ಅವಲಕ್ಕಿ ಎಲ್., ಜಿಲ್ಲಾ ಸಂಘಟನಾ ಶಿಕ್ಷಕರು ಶ್ರೀ ರವಿ ಸಿ., ಜಿಲ್ಲಾ ಸಂಘಟಿಕರು ಶ್ರೀ ಮಲ್ಲೇಶಪ್ಪ ಕೆ.ಟಿ., ಸರ್ಕಾರಿ ವಿಜ್ಞಾನ ಕಾಲೇಜು ರೋವರ್ ಸ್ಕೌಟ್ ಲೀಡರ್ ಡಾ. ಕೆ. ರಾಘವೇಂದ್ರ, ರೇಂಜರ್ ಲೀಡರ್ ಕು|| ಮೇಘನಾ ಬಿ.ಎನ್., ಜಿಲ್ಲಾ ಯುವ ಸಮಿತಿಯ ಅಧ್ಯಕ್ಷರು ಕುಮಾರ ಸಂತೋಷ. ಎಸ್., ಯುವ ಸಮಿತಿಯ ಕಾರ್ಯದರ್ಶಿ ಶ್ರೀ ಚಿದಾನಂದ ಎಲ್. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

* ಏಪ್ರಿಲ್ 30 ರಂದು ಜಿಲ್ಲಾ ಸಂಸ್ಥೆಯ ಕಾರ್ಯಾಲಯದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಜಿ.ಎಸ್. ಉಜ್ಜಿನಪ್ಪನವರು ವಹಿಸಿಕೊಂಡಿದ್ದರು "ಕಳಬೇಡ ಕೊಲಬೇಡ ಹುಸಿಯ ನುಡಿಯಬೇಡ ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರ ಅಳಿಯಲು ಬೇಡ ಇದೇ ಅಂತರಂಗ ಶುದ್ದಿ ಇದೇ ಬಹಿರಂಗ ಶುದ್ದಿ" ಎಂದು ಬಸವಣ್ಣನವರ ನುಡಿಮುತ್ತುಗಳನ್ನು ನುಡಿದರು ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ಸಂಸ್ಥೆಯ ಯುವ ಸಮಿತಿಯ ಕಾರ್ಯದರ್ಶಿಯಾದ ಕುಮಾರ ಚಿದಾನಂದ ಎಲ್.ರವರು ಸರ್ವರಿಗೂ ಸ್ವಾಗತ ಮತ್ತು ವಂದನಾರ್ಪಣೆಯನ್ನು ಕೋರಿದರು.




* ಜಿಲ್ಲಾ ಸಂಸ್ಥೆ ಚಿತ್ರದುರ್ಗ ಹಾಗೂ ರೆಡ್‌ಕ್ರಾಸ್ ಸಹಯೋಗದೊಂದಿಗೆ ಮೇ 09 ರಿಂದ 10ರ ವರೆಗೆ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಜಿಲ್ಲಾ ಮಟ್ಟದ ಪ್ರಥಮ ಚಿಕಿತ್ಸೆ ಹಾಗೂ ವಿಪತ್ತು ನಿರ್ವಹಣಾ ಕಾರ್ಯಾಗಾರವನ್ನು ಸಂಘಟಿಸಲಾಯಿತ್ತು. ಚಿತ್ರದುರ್ಗ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳು ಶ್ರೀ ಮೆಹಬೂಬ್ ಜಿಲಾನಿ ಖುರೇಷಿ, ಈ ಕಾರ್ಯಕ್ರಮದ ಉದ್ಘಾಟನೆಯನ್ನು ನಡೆಸಿಕೊಟ್ಟರು ಈ ಕಾರ್ಯಕ್ರಮದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಾಜ್ಯ ಶಾಖೆ ಸಭಾಪತಿ ಶ್ರೀ ಬಸ್ರೂರ್ ರಾಜೀವ್ ಶೆಟ್ಟಿ ದೇಶದ ಗಡಿಭಾಗಗಳಲ್ಲಿ ಸ್ವಯಂಸೇವಕರಾಗಿ ಸೇವೆಯನ್ನು ಸಲ್ಲಿಸಲು ಸಿದ್ದರಾಗಿರಿ ಎಂದು ರೋವರ್ಸ್ ಮತ್ತು ರೇಂಜರ್ಸ್ ಗಳಿಗೆ ಉತ್ತೇಜಿಸಿದರು. ರಾಷ್ಟ್ರೀಯ ಡಿಜಾಸ್ಟರ್ ಮ್ಯಾನೇಜ್ಮೆಂಟ್ ತರಬೇತಿದಾರರಾದ ಡಾ. ಕುಮಾರ್ ಅವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ವಿಜ್ಞಾನ ಕಾಲೇಜು ಪ್ರಾಂಶುಪಾಲರು. ಪ್ರೊ. ಸಿದ್ದರಾಮ ಚೆನ್ನಗೊಂಡರವರು ವಹಿಸಿಕೊಂಡಿದ್ದರು ಈ ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ಅಜೀವ ಸದಸ್ಯರಾದ ಶ್ರೀ ಹೆಚ್. ಬಸವರಾಜ್ ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ದಕ್ಷಿಣ ಕನ್ನಡ

* ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್ ಮತ್ತು ಗೈಡ್ ಕ್ಯಾಪ್ಟನ್‌ಗಳ ಪ್ರಾಥಮಿಕ ಹಾಗೂ ಮುಂದುವರಿದ ತರಬೇತಿ ಶಿಬಿರವು ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ಏಪ್ರಿಲ್ 21 ರಂದು ಪ್ರಾರಂಭವಾಯಿತು. ಇದರ ಉದ್ಗಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಶಾಂತರಾಮ ಪ್ರಭುರವರು ಸ್ವಾಗತಿಸಿದರು. ಶ್ರೀ ಆನಂದ ಅಡಿಗರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಪೂಜಾರಿಯವರು ಉದ್ಘಾಟನೆಯನ್ನು ಮಾಡಿದರು. ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ವಂದನಾರ್ಪಣೆ ಗೈದರು. ಮಂಗಳೂರು ನಗರ ದಕ್ಷಿಣ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರೀತಿ ಲೋಬೋ ಕಾರ್ಯಕ್ರಮ ನಿರೂಪಿಸಿದರು. ತರಬೇತಿ ಶಿಬಿರದ ಉದ್ಘಾಟನೆ ಸಮಾರಂಭದಲ್ಲಿ ಸ್ಕೌಟಿಂಗ್‌ನ ಉನ್ನತಪದವಿ ಹಿಮಾಲಯ ವೃಕ್ಷಮಣಿಯನ್ನು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಶಾಂತರಾಮ ಪ್ರಭುರವರು ಶ್ರೀಮತಿ ಲಕ್ಷ್ಮಿ ಕಾಮತ್, ಹಾಗೂ ಶ್ರೀಮತಿ ಕವಿತಾ, ಪ್ರತಿಜ್ಞೆ ಬೋಧಿಸಿ ಧಾರಣೆ ಮಾಡಿದರು.



* ಏಪ್ರಿಲ್ 27 ರಂದು ಶ್ರೀ ವಸಂತ್‌ರಾವ್, ಉಪಾಧ್ಯಕ್ಷರು, ದ.ಕಜಿಲ್ಲಾ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಿತು. ಶ್ರೀ ಚಂದ್ರಹಾಸ್, ಗುರುಪುರ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ವರದಿಯನ್ನು ಶ್ರೀಮತಿ ಪ್ರಫುಲ್ಲರವರು ನೀಡಿದರು. ಶಿಬಿರಾರ್ಥಿಗಳು ಅನಿಸಿಕೆಯನ್ನು ತಿಳಿಸಿದರು. ವೇದಿಕೆಯಲ್ಲಿ ಜಿಲ್ಲಾ ಪದಾಧಿಕಾರಿಗಳು ನಾಯಕರುಗಳಾದ ಶ್ರೀ ರಾಮರಾವ್, ಶ್ರೀ ಆನಂದ ಅಡಿಗ, ವಿಮಲಾ ಬಾಯಿ, ಸಂಧ್ಯಾ ಶೆಣ್ಯೆ











ಉಪಸ್ಥಿತರಿದ್ದರು. ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಶಾಮತರಾಮ ಪ್ರಭು ಸ್ವಾಗತಿಸಿದರು. ಜಿಲ್ಲಾ ಗೈಡ್ ತರಬೇತಿ ಆಯುಕ್ತರಾದ ಶ್ರೀಮತಿ ಜಯಶ್ರೀ ಧನ್ಯವಾದ ನೀಡಿದರು.

* ಪಂಜ ಸ್ಥಳೀಯ ಸಂಸ್ಥೆ ಹಾಗೂ ಜೆ.ಸಿ.ಐ. ಪಂಜ ಪಂಚಶ್ರೀ ಇವುಗಳ ಜಂಟಿ ಆಶ್ರಯದಲ್ಲಿ ಸುಬ್ರಹ್ಮಣ್ಯ ಸಮೀಪದ ಏನೇಕಲ್ಲಿನ ಮರಕತ ಎಂಬಲ್ಲಿ ಈಜು ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಏಪ್ರಿಲ್ 21 ರಂದು ನಡೆಯಿತು. ಇದರ ಉದ್ಘಾಟನೆಯನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ನೆರವೇರಿಸಿದರು. ಜೆ.ಸಿ.ಐ. ಪಂಜ ಪಂಚಶ್ರೀಯ ಅಧ್ಯಕ್ಷರಾದ ಶ್ರೀ ವಾಚಣ್ಣ ಕೆರೆಮೂಲೆ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕಾಶಿನಾಥ್ ಗೋಗಟೆ, ಜಿಲ್ಲಾ ಪದಾಧಿಕಾರಿಗಳು, ಜೆ.ಸಿ.ಐ. ಪದಾಧಿಕಾರಿಗಳು. ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ರಾಷ್ಟ್ರೀಯ ಈಜು ತರಬೇತುದಾರರು ಉಪಸ್ಥಿತರಿದ್ದರು.



## ಧಾರವಾಡ

* ಏಪ್ರಿಲ್ 16 ರಿಂದ 18ರ ವರೆಗೆ ಜಿಲ್ಲಾ ಸಂಸ್ಥೆಯ ಆವರಣದಲ್ಲಿ ನಡೆದ ಜಿಲ್ಲಾ ಮಟ್ಟದ ನಿಪುಣ್ ತರಬೇತಿ ಶಿಬಿರದಲ್ಲಿ 37 ರೋವರ್ಸ್‌ಗಳು ಮತ್ತು 59 ರೇಂಜರ್ಸ್‌ಗಳು 4 ರೋವರ್ ಸ್ಕೌಟ್ ಮತ್ತು ರೇಂಜರ್ ಲೀಡರ್‌ಗಳು ಮತ್ತು ಜಿಲ್ಲಾ ಪದಾಧಿಕಾರಿಗಳು ಹಾಗೂ ಸಹಾಯಕರಾಗಿ ಶ್ರೀ ಎಸ್.ಎನ್. ಸಾವಳಗಿ ಜಿಲ್ಲಾ ಕಾರ್ಯದರ್ಶಿ, ಶ್ರೀ ಜೆ.ಆರ್. ಜವಳಿ, ಜಂಟಿ ಕಾರ್ಯದರ್ಶಿಗಳು (ಸ್ಕೌಟ್) ಶ್ರೀ ಜಿ.ಎ. ಬೆಳಹಾರ ಸ್ಕೌಟ್ ಮಾಸ್ಟರರು ಭಾಗವಹಿಸಿದರು.



* ಏಪ್ರಿಲ್ 27 ರಂದು ಜಿಲ್ಲಾ ಸಂಸ್ಥೆಯ ಆವರಣದಲ್ಲಿ ನಡೆದ ಕ್ಯಾಂಡಲ್ ಮಾರ್ಚ್ (ಪಹಲ್ಗಾವ್ ನರಮೇಧ ಅಂಗವಾಗಿ) ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳೊಂದಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಶ್ರೀ ವ್ಹಿ.ವ್ಹಿ. ಕಟ್ಟಿ, ಜಿಲ್ಲಾ ಉಪಾಧ್ಯಕ್ಷರು, ಶ್ರೀ ಡಿ.ಡಿ. ಮಾಳಗಿ, ಜಿಲ್ಲಾ ಆಯುಕ್ತರು (ರೋವರ್), ಶ್ರೀಮತಿ ಭಾಗಿರಥಿ ಕಲಕಾಂಬಕರ, ಜಿಲ್ಲಾ ಆಯುಕ್ತರು (ಗೈಡ್), ಶ್ರೀ ಎಸ್.ವ್ಹಿ. ಮೊರಬ ಸ್ಥಾನಿಕ ಆಯುಕ್ತರು, ಶ್ರೀ ಬಿ.ಎ. ಬೆಳಹಾರ, ಸ್ಕೌಟ್ ಮಾಸ್ಟರರು ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

## ಹಾಸನ

* "ಮಕ್ಕಳ ಮನೋಮಂಟಪದ ಒಳಗಿನ ಸುಪ್ತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ವೇದಿಕೆಗಳಾಗಿ ಬೇಸಿಗೆ ಶಿಬಿರಗಳು ರೂಪುಗೊಳ್ಳಬೇಕು" ಎಂದು ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶ್ರೀ ಹೆಚ್.ಬಿ. ವೆಂಕಟೇಶ್ ತಿಳಿಸಿದರು. ಪಟ್ಟಣದ ಸೋಶಿಯಲ್ ಕ್ಲಬ್‌ನ ಸ್ನೇಹ ಸದನ ಒಳಾಂಗಣ ಕ್ರೀಡಾಂಗಣದಲ್ಲಿ ಹಾಸನ ಗೈಡ್ಸ್ ಸ್ಥಳೀಯ ಸಂಸ್ಥೆ ವತಿಯಿಂದ ಏಪ್ರಿಲ್ 3 ರಿಂದ 8ರ ವರೆಗೆ ಆಯೋಜಿಸಲಾಗಿದ್ದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ವಕೀಲ ಶ್ರೀ ರವೀಶ್ ಅವರು ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಸಾಂಪ್ರದಾಯಿಕ ಜಾನಪದ ಮತ್ತು ದೇಶಿ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಹೆಚ್ಚು ಅವಕಾಶವನ್ನು ಕಲ್ಪಿಸುವಂತೆ ಸೂಚಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸೋಶಿಯಲ್ ಕ್ಲಬ್ ಅಧ್ಯಕ್ಷ ಶ್ರೀ ಕೆ.ಎಂ. ಹೊನ್ನಪ್ಪ ಅವರು ಮಾತನಾಡಿ, ಸೇವಾ ಮನೋಭಾವದಿಂದ ನೂರಾರು ಮಕ್ಕಳಿಗೆ ಉಚಿತವಾಗಿ ಬೇಸಿಗೆ ಶಿಬಿರದ ಮೂಲಕ, ಸಂಗೀತ, ಚಿತ್ರಕಲೆ, ವಿಜ್ಞಾನ, ಗಣಿತ ಸೇರಿದಂತೆ ಹತ್ತುಹಲವು ಸೃಜನಶೀಲ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ಮತ್ತಷ್ಟು ಪೂರ್ವ ಸಿದ್ಧತೆಯೊಂದಿಗೆ ಕಾರ್ಯಕ್ರಮಗಳನ್ನು ರೂಪಿಸುವಂತೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಬೇಸಿಗೆ ಶಿಬಿರದ ಪ್ರಾಸ್ತಾವಿಕ ನುಡಿಗಳನ್ನು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಕುಮುದ ಆರ್. ಅವರು ನುಡಿದರು. ಆರು ದಿನಗಳ ಕಾಲ ದಾನಿಗಳು ಶಿಬಿರಕ್ಕೆ ಸಹಕಾರವನ್ನು ನೀಡಿದರು ಸೋಶಿಯಲ್ ಕ್ಲಬ್ ವತಿಯಿಂದ ಶಿಬಿರ ನಡೆಸಲು ಉಚಿತವಾಗಿ ಸ್ಥಳವನ್ನು ನೀಡಿದ್ದಕ್ಕಾಗಿ ಕ್ಲಬ್ ಅಧ್ಯಕ್ಷರಿಗೆ ಮತ್ತು ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಅಧ್ಯಕ್ಷ ಶ್ರೀ ಶಂಕರ ನಾರಾಯಣ ಐತಾಳ್, ಶ್ರೀಮತಿ ರಂಗಮ್ಮ, ಹರಿಕಥೆ ವಿದುಷಿ ಶ್ರೀಮತಿ ಪಾರ್ವತಿ ಸೇರಿದಂತೆ ನೂರಾರು ಮಕ್ಕಳು ಮತ್ತು ಪೋಷಕರು ಇದ್ದರು.



* ಸ್ಥಳೀಯ ಸಂಸ್ಥೆ ಹಾಸನ ಹಾಗೂ ಗ್ಯಾರಳ್ಳಿ ತಮ್ಮಯ್ಯ ಶಾಲೆಯ ವತಿಯಿಂದ ಪಹಲ್ಗಾಮ್‌ನಲ್ಲಿ, ಉಗ್ರರ ದಾಳಿಗೆ ಸಿಕ್ಕು ಮಡಿದ ಭಾರತೀಯರಿಗೆ ಶ್ರದ್ಧಾಂಜಲಿ ಸಲ್ಲಿಸುವುದರೊಂದಿಗೆ ಉಗ್ರರ ಈ ದುರ್ವರ್ತನೆಯನ್ನು ಖಂಡಿಸಿಲಾಯಿತು, ಮನುಷ್ಯನ ನೆಮ್ಮದಿಯ ಬದುಕಿಗೆ ಶಾಂತಿ ಸೌಹಾರ್ದತೆ ಅತ್ಯಗತ್ಯವಾಗಿದ್ದು, ಇಂತಹ ಕ್ರೂರತೆಯನ್ನು ಕೊನೆಗಾಣಿಸಬೇಕೆಂದು ತಿಳಿಸಲಾಯಿತು.

* ಆಲೂರು ತಾಲ್ಲೂಕು ಸ್ಥಳೀಯ ಸಂಸ್ಥೆಯ ವತಿಯಿಂದ ಎಸ್.ವಿ. ಪಬ್ಲಿಕ್ ಶಾಲೆ ಬೈರಪುರದಲ್ಲಿ ಸ್ಕೌಟ್ಸ್ ಮಾಸ್ಟರ್ ಮತ್ತು ಗೈಡ್ಸ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರವನ್ನು



ಏಪ್ರಿಲ್ 02 ರಿಂದ 08ರ ವರಗೆ ನಡೆಸಲಾಯಿತು. ಶಿಬಿರದಲ್ಲಿ 40ಕ್ಕೂ ಹೆಚ್ಚು ಶಿಬಿರಾರ್ಥಿಗಳು ಭಾಗವಹಿಸಿ ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ತಾಲ್ಲೂಕು ಉಪಾಧ್ಯಕ್ಷರಾದ ಶ್ರೀಮತಿ ಪೂರ್ಣಿಮರವರು ತರಬೇತಿ ಶಿಬಿರವನ್ನು ಉದ್ಘಾಟನೆ ಮಾಡಿದರು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಕೃಷ್ಣೇಗೌಡರವರು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಶಿಬಿರಾರ್ಥಿಗಳಿಗೆ ಶುಭಕೋರಿ ಪ್ರಮಾಣ ಪತ್ರವನ್ನು ವಿತರಣೆ ಮಾಡಿದರು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಸಂಪೂರ್ಣ ಸಹಕಾರವನ್ನು ನೀಡಿದರು, ತಾಲ್ಲೂಕು ಕಾರ್ಯದರ್ಶಿ ಶ್ರೀ ಕೋಟ್ರೇಶ್ ಎಸ್. ಉಪ್ಪಾರ್ ರವರು ಶಿಬಿರದ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕರವರು ಶಿಬಿರವನ್ನು ಸಂಘಟಿಸಿದರು ಶ್ರೀ ಎಂ.ಎಸ್. ಪ್ರಕಾಶ್, ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ ವಿಭಾಗದ ನಾಯಕರಾಗಿ ಹಾಗೂ ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಚಂದ್ರಮತಿರವರು ಕಾರ್ಯನಿರ್ವಹಿಸಿರುತ್ತಾರೆ.

* ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆಯವತಿಯಿಂದ ತಾಲ್ಲೂಕು ಮಟ್ಟದ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ ಮೂಲ ತರಬೇತಿ ಶಿಬಿರವನ್ನು ಮೇ 05 ರಿಂದ 12ರ ವರಗೆ ಹೆಚ್.ಕೆ.ಎಸ್. ಶಾಲೆ ಹಾಸನದಲ್ಲಿ ನಡೆಸಲಾಯಿತು. ಶಾಲಾ ಕಾರ್ಯದರ್ಶಿಗಳಾದ ಶ್ರೀ ಪ್ರಶಾಂತ್ ಗೌಡ ಮತ್ತು ಶಾಲಾ ಮುಖ್ಯೋಪಾಧ್ಯಾಯರಾದ ಡಾ. ಗೌರರವರು ದೀಪವನ್ನು ಬೆಳಗುವ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಪ್ರಾಸ್ತಾವಿಕ ನುಡಿಗಳನ್ನು ನುಡಿದರು ಹಾಗೂ ಶಿಬಿರದಲ್ಲಿ ಸಹನಾಯಕರಾಗಿ ಕಾರ್ಯನಿರ್ವಹಿಸಿದರು. ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಬ್ ವಿಭಾಗದ ನಾಯಕರಾಗಿ ಶ್ರೀಮತಿ ಮಧು ಸುಮ, ಸ್ಕೌಟ್ ಮಾಸ್ಟರ್ ವಿಭಾಗದ ನಾಯಕರಾಗಿ ಶ್ರೀ ಎಂ.ಎಸ್ ಪ್ರಕಾಶ್ ಹಾಗೂ ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಬಿ.ಎಸ್ ವನಜಾಕ್ಷಿ ಕಾರ್ಯನಿರ್ವಹಿಸಿರುತ್ತಾರೆ. ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕರವರು ಶಿಬಿರವನ್ನು ಸಂಘಟಿಸಿದರು, ಶಿಬಿರದ ಸಮಾರೋಪ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರು ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಶಿಬಿರಾರ್ಥಿಗಳಿಗೆ ಶುಭಹಾರೈಸಿರುತ್ತಾರೆ.




* ಏಪ್ರಿಲ್ 11 ರಿಂದ 12ರ ವರೆಗೆ ಹಾಸನ ಜಿಲ್ಲಾ ಸಂಸ್ಥೆಯವತಿಯಿಂದ ಜಿಲ್ಲಾ ಮಟ್ಟದ ಹೆಚ್.ಡಬ್ಲ್ಯೂ.ಬಿ. ಮೀಟ್‌ನ್ನು ಕಾರವಾರ ಹೊನ್ನಾವರದಲ್ಲಿ ಸಂಘಟಿಸಲಾಯಿತು. ಮೀಟ್‌ನಲ್ಲಿ ಜಿಲ್ಲಾ ಸಂಸ್ಥೆಯ ವಾರ್ಷಿಕ ಕಾರ್ಯಕ್ರಮದ ಬಗ್ಗೆ, ತರಬೇತಿ ಬಗ್ಗೆ ಚಟುವಟಿಕೆಯ ಬಗ್ಗೆ ಚರ್ಚೆ ನಡೆಸಲಾಯಿತ್ತು.

* ಏಪ್ರಿಲ್ 25 ರಂದು ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ವಿಪತ್ತು ನಿರ್ವಹಣೆ ತರಬೇತಿ ಶಿಬಿರದ ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ಜಿ.ಡಿ. ನಾರಾಯಣ್ ನೇರವೇರಿಸಿಕೊಟ್ಟರು ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್



ಗುರೂಜಿ ವ್ಯಕ್ತಿತ್ವ ವಿಕಸನ ತರಬೇತಿಯನ್ನು ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಬಿ.ಎಸ್. ವನಜಾಕ್ಷಿ ಹಾಗೂ ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕರವರು ಭಾಗವಹಿಸಿದರು. ರೋವರ್ ಸ್ಕೌಟ್ ಲೀಡರ್ ಡಾ|| ಸುರೇಶ್ ಮತ್ತು ರೇಂಜರ್ ಲೀಡರ್ ಡಾ|| ಪ್ರಮಿಳಾ ಸಂಘಟಿಸಿದ್ದರು.

* ಹಾಸನ ಜಿಲ್ಲೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಳೆಪೇಟೆ ಅರಸೀಕೆರೆ ತಾಲ್ಲೂಕಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಶಿಬಿರದ ನಾಯಕತ್ವವನ್ನು ಶ್ರೀಮ ಸತೀಶ್‌ರವರು ವಹಿಸಿಕೊಂಡಿದ್ದರು. ಸಕಲೇಶಪುರ ತಾಲ್ಲೂಕಿನಲ್ಲಿ ಪಯೋನಿರಿಂಗ್ ಶಾಲೆ ಮತ್ತು ರೋಟರಿ ಶಾಲೆಯಲ್ಲಿ ಬೇಸಿಗೆ ಶಿಬಿರವನ್ನು ನಡೆಸಿರುತ್ತಾರೆ ಶಿಬಿರದ ಉಸ್ತುವಾರಿಯನ್ನು ಶ್ರೀ ಉಮೇಶ್ ಮತ್ತು ಶ್ರೀಮತಿ ಕಾಂತಾಮಣಿ ವಹಿಸಿಕೊಂಡಿದ್ದರು.



* ಹಾಸನ ಜಿಲ್ಲಾ ಸಂಸ್ಥೆಯ ಮುಂಭಾಗದಲ್ಲಿ ನೂತನ ಕಟ್ಟಡಕ್ಕೆ ಶಿಲಾನ್ಯಾಸವನ್ನು ಮಾಡಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ತಾಲ್ಲೂಕು ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದರು.

* ಎನ್.ಡಿ.ಆರ್.ಕೆ ಪ್ರಥಮ ದರ್ಜೆ ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್ ಘಟಕದ ವತಿಯಿಂದ ಕಾರ್ಯಗಾರವನ್ನು ಆಯೋಜನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜು ಪ್ರಾಂಶುಪಾಲರು, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರು ವಿದ್ಯಾರ್ಥಿಗಳಿಗೆ ರಕ್ತದಾನದ ಬಗ್ಗೆ ಮಾಹಿತಿಯನ್ನು ನೀಡಿದರು ಸ್ಕೌಟಿಂಗ್ ಮತ್ತು ಗೈಡಿಂಗ್ ಬಗ್ಗೆ ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕರವರು ಮಾಹಿತಿಯನ್ನು ನೀಡಿದರು.

*"ಬೇಸಿಗೆ ಶಿಬಿರಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ರಹದಾರಿಗಳಿದ್ದಂತೆ, ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಮಹತ್ವದ ಪಾತ್ರ ವಹಿಸುತ್ತದೆ" ಎಂದು ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಅಭಿಪ್ರಾಯಪಟ್ಟರು. ಅವರು ಸ್ಥಳೀಯ ಸಂಸ್ಥೆ ಆಲೂರು ಹಾಗೂ ಭೈರಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ರತ್ನಮ್ಮ ಬುಲ್-ಬುಲ್ಸ್ ಘಟಕದ ವತಿಯಿಂದ ಶಾಲಾವರಣದಲ್ಲಿ ಹಮ್ಮಿಕೊಂಡಿದ್ದ



ಬೇಸಿಗೆ ಶಿಬಿರವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿದರು. ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಎಂ.ಎಲ್. ಎಲಿಜಬೆತ್ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ನಮ್ಮ ಶಾಲೆಯ ಶಿಕ್ಷಕರ ಸಹಕಾರದೊಂದಿಗೆ ನಮ್ಮ ಶಾಲೆಯ ಪ್ರಗತಿಯಾಗಿದೆ. ತಾಲ್ಲೂಕು ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳ ಉತ್ತೇಜನ ಬಹಳ ಮುಖ್ಯವಾಗಿ ಪರಿಣಮಿಸಿದೆ. ನಮ್ಮ ಮಕ್ಕಳ ನಿರಂತರ ಚಟವಟಿಕೆಯಿಂದ ಶಾಲೆ ಸಾಧನೆ ಮಾಡಲು ಸಾಧ್ಯವಾಗಿದೆ" ಎಂದರು. ವೇದಿಕೆಯಲ್ಲಿ ಹಿರಿಯ ಶಿಕ್ಷಕಿ ಶ್ರೀಮತಿ ನಾಗರತ್ನಮ್ಮ ಡಿ.ಕೆ. ಪ್ರಾರ್ಥಿಸಿದರು, ಶ್ರೀಮತಿ ಎಚ್.ಸಿ. ಜ್ಯೋತಿ ಸ್ವಾಗತಿಸಿದರು, ಶ್ರೀಮತಿ ಸಾನಿಯಾ ನಿರೂಪಿಸಿದರು.

* ಹೊಳೆನರಸೀಪುರ ತಾಲ್ಲೂಕು ಸಂಸ್ಥೆಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಬೇಸಿಗೆ ಶಿಬಿರವನ್ನು ಏಪ್ರಿಲ್ 03 ರಿಂದ 05ರ ವರಗೆ ನಡೆಸಿರುತ್ತಾರೆ. ಶಿಬಿರದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕ, ಶ್ರೀಮತಿ ಸೋಫಿಯ ಪಾರ್ನಾಂಡಿಸ್, ರೇಂಜರ್ ಲೀಡರ್ ಉಪಸ್ಥಿತರಿದ್ಧರು.



## ಕೋಲಾರ

* ಏಪ್ರಿಲ್ 17 ರಂದು ಕೋಲಾರ ಜಿಲ್ಲಾ ಸಂಸ್ಥೆಯ ಮಾಜಿ ಕಾರ್ಯದರ್ಶಿಗಳಾದ ದಿವಂಗತ ಡಬ್ಲ್ಯೂ.ಇ.ಎಸ್. ಕುಮಾರ್‌ರವರ ನೆನಪಿಗಾಗಿ ಸ್ಕೌಟ್ ಭವನಕ್ಕೆ 50 ಛೇರ್‌ಗಳನ್ನು ಅವರ ಕುಟುಂಬಸ್ಥರು ಕೊಡುಗೆಯಾಗಿ ನೀಡಿರುತ್ತಾರೆ.




* ಏಪ್ರಿಲ್ 29 ರಂದು ಜಿಲ್ಲಾ ಸ್ಕೌಟ್ ಭವನದ ಮಹಡಿಯ ಮೇಲ್ಛಾವಣಿಯ ಮೇಲೆ ಸಮುದಾಯ ಭವನದ ನಿರ್ಮಾಣಕ್ಕೆ ಸರಳವಾಗಿ ಪೂಜಾ ಕಾರ್ಯವನ್ನು ನೆರವೇರಿಸಲಾಯಿತು.

* ಮೇ 5 ರಿಂದ 11 ರವರೆಗೆ ಮೂಲ ತರಬೇತಿ ಶಿಬಿರವನ್ನು ನಗರದ ಸ್ಕೌಟ್ ಭವನದಲ್ಲಿ ಆಯೋಜನೆ ಮಾಡಲಾಗಿತ್ತು. "ಶಿಕ್ಷಕರು ಸದಾ ಓದುವ ಮತ್ತು ಜಾಗತಿಕ ವಿಷಯಗಳನ್ನು ಅರಿತು ತಮ್ಮ ವ್ಯಾಪ್ತಿಯ ವಿದ್ಯಾರ್ಥಿಗಳಿಗೆ ತಿಳಿಸುವುದರ ಸಮಾಜದ



ಸುಧಾರಣೆ ಸಾಧ್ಯ" ಎಂದು ಕೋಲಾರ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ತಿಳಿಸಿದರು. ಕೋಲಾರ ನಗರದ ಸ್ಕೌಟ್ ಭವನದಲ್ಲಿ ಸ್ಕೌಟ್ಸ್-ಗೈಡ್ಸ್ ಸಂಸ್ಥೆ ವತಿಯಿಂದ ಆಯೋಜನೆ ಮಾಡಿದ್ದ 7 ದಿನಗಳ ಮೂಲತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಗೈಡ್ಸ್ ಆಯುಕ್ತೆ ಶ್ರೀಮತಿ ನವೀನಾರವರು ಮಾತನಾಡಿ "ಪ್ರಾಥಮಿಕ ಶಾಲಾ ಶಿಕ್ಷಕರನ್ನು ನಾವು ಸದಾ ನೆನೆಯಬೇಕು, ಏಕೆಂದರೆ ನಮ್ಮ ಬಾಲ್ಯದ ದಿನಗಳಲ್ಲಿ ನಮ್ಮನ್ನು ಉತ್ತಮ ಮಾರ್ಗದಲ್ಲಿ ಸಾಗುವಂತೆ ದಾರಿ ತೋರಿಸಿದ್ದಾರೆ" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಿಬಿರದಲ್ಲಿ ಗೈಡ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಉಮಾದೇವಿ, ಫ್ಲಾಕ್ ವಿಭಾಗಕ್ಕೆ ಶ್ರೀಮತಿ ಗೌರಾಬಾಯಿ, ಕಬ್ ವಿಭಾಗಕ್ಕೆ ಸ್ಕೌಟ್ ಶ್ರೀ ಬಾಬು ಸೇವೆ ಸಲ್ಲಿಸಿದರು.

* ಮೇ 16 ರಂದು ಕೋಲಾರ ನಗರದ ತಾಲ್ಲೂಕು ಕಛೇರಿ ಆವರಣದ ಸ್ವಚ್ಚತಾ ಕಾರ್ಯದ ಸೇವಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. "ವಿಶ್ವದಲ್ಲಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರ ಭಾರತವಾಗಿದ್ದು, ನಮ್ಮಲ್ಲಿನ ಯುವಶಕ್ತಿ ತಿಂಗಳಿಗೆ ಒಮ್ಮೆ ತಮ್ಮ ಸುತ್ತಲಿನ ಸಮುದಾಯದ ಸಾರ್ವಜನಿಕ ಪ್ರದೇಶಗಳಾದ ಶಾಲೆ, ಆಸ್ಪತ್ರೆ, ಉದ್ಯಾನವನ, ಸರ್ಕಾರಿ ಕಚೇರಿಗಳ ಆವರಣಗಳನ್ನು ಸ್ವಚ್ಚಗೊಳಿಸುವ ಮತ್ತು ಸಂರಕ್ಷಿಸುವ ಸೇವಾ ಕಾರ್ಯಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವ ಮೂಲಕ ಮುಂದಿನ ಪೀಳಿಗೆಗೆ ಉತ್ತಮ ವಾತಾವರಣವನ್ನು ಉಳಿಸುವಂತಾಗಬೇಕು" ಎಂದು ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ತಾಲ್ಲೂಕು ಪರಿಷತ್ ಸಮಿತಿ ಅಧ್ಯಕ್ಷರಾದ ಶ್ರೀ ಕಾಡಹಳ್ಳಿ ಶಶಿಕುಮಾರ್‌ರವರು ತಿಳಿಸಿದರು.



ರೋಟರಿ ಕೋಲಾರ ನಂದಿನಿ ಅಧ್ಯಕ್ಷ ಶ್ರೀ ಸ್ಕೌಟ್ ಬಾಬು ಮಾತನಾಡಿ "ಯುವಕರು ತಮ್ಮ ವಿರಾಮ ವೇಳೆಯನ್ನು ಅಥವಾ ನಿರ್ದಿಷ್ಟ ಸಮಯವನ್ನು ಸಮುದಾಯದ ಅಭಿವೃದ್ದಿಗಾಗಿ ಮೀಸಲಾಗಿರಿಸಿ, ತಮ್ಮ ಗೆಳೆಯರನ್ನು ಒಂದುಗೂಡಿಸಿಕೊಂಡು ಸೇವಾ ತಂಡವನ್ನು ರಚನೆ ಮಾಡಿ ತಿಂಗಳಿಗೆ ಒಮ್ಮೆ ಈ ರೀತಿಯ ಸೇವಾ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ತಮ್ಮ ಮನಸ್ಸು ಉಲ್ಲಾಸವಾಗುವುದು" ಎಂದರು ಸ್ಕೌಟ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

* ಮೇ 16 ರಂದು ಮುಳಬಾಗಿಲು ತಾಲ್ಲೂಕಿನ ಜ್ಞಾನ ಜ್ಯೋತಿ ಶಾಲೆಯ ಆವರಣದಲ್ಲಿ ಒಂದು ದಿನದ ಪ್ರಾರಂಭಿಕ ತರಬೇತಿ ಶಿಬಿರವನ್ನು ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಮುನಿನಾರಾಯಣಪ್ಪ ಮತ್ತು ಶ್ರೀಮತಿ ಗೌರಾಬಾಯಿರವರ ನಾಯಕತ್ವದಲ್ಲಿ ಆಯೋಜಿಸಿ 49 ಶಿಕ್ಷಕರಿಗೆ ತರಬೇತಿ ನೀಡಲಾಯಿತು. ಈ ಶಿಬಿರವನ್ನು ಶಾಲೆಯ ಆಡಳಿತಾದಿಕಾರಿ ಶ್ರೀಯುತ ಚಂದ್ರಶೇಖರ್, ಪ್ರಾಂಶುಪಾಲರಾದ ಶ್ರೀಮತಿ ಮಂಜುಳ ಚಂದ್ರಶೇಖರ್‌ರವರು ಉದ್ಘಾಟಿಸಿ ಶುಭಕೋರಿದರು. ಈ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಉಮಾದೇವಿ, ಶ್ರೀ ಸ್ಕೌಟ್ ಬಾಬು, ಶ್ರೀಮತಿ ಹೇಮಾವತಿರವರು ಸೇವೆ ಸಲ್ಲಿಸಿದರು.



* ಮೇ 17 ರಂದು ಜಿಲ್ಲಾ ಮಟ್ಟದಲ್ಲಿ ಅಪರೇಷನ್ ಸಿಂಧೂರ್ ವಿಜಯೋತ್ಸವದ ಅಂಗವಾಗಿ ದೇಶಕ್ಕಾಗಿ ನಾಗರಿಕರು ಎಂಬ ಘೋಷವಾಕ್ಯದ 1500 ಅಡಿಗಳ ಉದ್ದದ ರಾಷ್ಟ್ರಧ್ವಜದ ಪ್ರದರ್ಶನಾ ತಿರಂಗಾ ಯಾತ್ರೆಯಲ್ಲಿ ಸೇವೆ ಸಲ್ಲಿಸಲಾಯಿತು.




* ಮೇ 17 ರಂದು ರೋಟರಿ ಸಂಸ್ಥೆಯ ನಿರ್ದೇಶಕರಾದ ರೋ. ಕಾಡಹಳ್ಳಿ ಶ್ರೀ ಶಶಿಕುಮಾರ್ ಮತ್ತು ಅವರ ಪತ್ನಿ ಶ್ರೀಮತಿ ಮಂಜುಳರವರು ಸ್ಕೌಟ್ ಭವನಕ್ಕೆ ಗ್ರಾಸ್ ಕಟರ್ ಅನ್ನು ಕೊಡುಗೆಯಾಗಿ ನೀಡಿರುತ್ತಾರೆ.

## ರಾಯಚೂರು

* ಮಾನ್ವಿ ಸ್ಥಳೀಯ ಸಂಸ್ಥೆಯ ಬಿವಿಆರ್ ಟೆಕ್ನೋ ಶಾಲೆಯಲ್ಲಿ ಮೇ 06 ರಿಂದ 08ರ ವರೆಗೆ ಬೇಸಿಗೆ ಶಿಬಿರ ಆಯೋಜನೆ ಮಾಡಲಾಯಿತು. ಸಂಸ್ಥೆಯ ಅಧ್ಯಕ್ಷ ಶ್ರೀ ಬಿ.ವಿ. ರೆಡ್ಡಿ ಉದ್ಘಾಟಿಸಿದರು. ಕಾರ್ಯದರ್ಶಿ ಶ್ರೀಮತಿ ಪದ್ಮಾವತಿ ಮಾತನಾಡಿ "ಇಂಥ ಶಿಬಿರಗಳು ಕಲಿಕಾ ಉತ್ಸಾಹವನ್ನು ಹೆಚ್ಚಿಸುತ್ತದೆ" ಎಂದರು. ದಳ ನಾಯಕ ಶ್ರೀ ಅಮ್ಜಾಬ್ ಹುಸೈನ್, ಮುಖ್ಯ ಉಪಾಧ್ಯಾಯರಾದ ಶ್ರೀ ಶರ್ಮತ್ ಖಾನ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಶಾಲೆಯ ಆಡಳಿತ ಮಂಡಳಿಯ ವಿವಿಧ ಸದಸ್ಯರು, ಇತರೆ ಶಿಕ್ಷಕರು, ಪಾಲಕರು, ಸಂಸ್ಥೆ ಕಾರ್ಯದರ್ಶಿ ಶ್ರೀ ಅವರ ರಾಮಲಿಂಗಪ್ಪ ಉಪಸ್ಥಿತರಿದ್ದರು.



## ವಿಜಯನಗರ

* ಏಪ್ರಿಲ್ 24 ರಂದು ವಿಜಯನಗರ ಜಿಲ್ಲಾ ಸಂಸ್ಥೆಗೆ ವಿಜಯನಗರ ಹಾಗೂ ಬಳ್ಳಾರಿ ಡಯಟ್ ಪ್ರಾಚಾರ್ಯರಾದ ಶ್ರೀ ಓ.ಆರ್. ಪ್ರಕಾಶ್‌ರವರು ಭೇಟಿ ನೀಡಿ ಜಿಲ್ಲಾ ಸಂಸ್ಥೆ ಮತ್ತು ಹೊಸಪೇಟೆ ತಾಲ್ಲೂಕಿನ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳೊಡನೆ ಬೇಸಿಗೆ ರಜೆಯಲ್ಲಿ ಮೂಲ ತರಬೇತಿ ಹಾಗೂ ಇತರ ಚಟುವಟಿಕೆಗಳನ್ನು ನಡೆಸುವ ಬಗ್ಗೆ ಚರ್ಚಿಸಿದರು. ಈ ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಮಂಜುನಾಥಪ್ಪ ಪಿ., ಶ್ರೀಮತಿ ಎ. ರೇಣುಕಾ, ಜಿಲ್ಲಾ ತರಬೇತಿ ಆಯುಕ್ತರ(ಗೈ) ಹೊಸಪೇಟೆ ತಾಲ್ಲೂಕು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ತಿಪ್ಪೇಸ್ವಾಮಿ, ಶ್ರೀ ಪಾಟೀಲ್ ಜಿ.ಬಿ.ಸಿ. ಜಿಲ್ಲಾ ಸಂಘಟಕರು ಹಾಜರಿದ್ದರು.



## ದಾವಣಗೆರೆ

* ಮೇ 18 ರಂದು ಜಿಲ್ಲಾಡಳಿತ ವತಿಯಿಂದ ಆಯೋಜಿಸಿದ ಮಾಕ್ ಡ್ರಿಲ್ ಅಣುಕು ಪ್ರದರ್ಶನದಲ್ಲಿ, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಮಹಾನಗರ ಪಾಲಿಕೆಯ ಅಂಗಳದಲ್ಲಿ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಿದರು. ಈ ಸಂದರ್ಭದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಗಂಗಾಧರ್ ಸ್ವಾಮಿ ಜಿ.ಎಂ. ರವರು ಹಾಗೂ ಜಿಲ್ಲಾ ಪಂಚಾಯತ್ ಸಿಇಓ ಶ್ರೀ ಸುರೇಶ್ ಬಿ. ಹಿಟ್ನಾಳ್, ಶ್ರೀ ಎಸ್.ಪಿ. ಉಮಾ ಪ್ರಶಾಂತ್, ಡಿಡಿಪಿಐ, ಶ್ರೀ ಕೊಟ್ರೇಶ್. ಜಿ, ಶ್ರೀ ಕಿರಣ್ ಇನ್ಸ್‌ಪೆಕ್ಟರ್ SDRF ಇವರುಗಳು ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಅಭಿನಂದಿಸಿ, ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಸೇವೆಗೆ ಸದಾ ಸಿದ್ಧರಾಗಿರುತ್ತದೆ ಇಂದು ಹೇಳಿದರು. ಶ್ರೀ ಎ.ಪಿ. ಷಡಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ರತ್ನ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ರವೀಂದ್ರ ಸ್ವಾಮಿ ಟಿ.ಎಂ., ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಹಾಗೂ ADC ಶ್ರೀ ನವೀನ್ ಮತ್ತು ಶ್ರೀಮತಿ ಅಶ್ವಿನಿ ಎಸ್‌ಜಿವಿ, ಶ್ರೀಮತಿ ದಿವ್ಯ, ಲೇಡೀ ಸ್ಕೌಟ್ ಮಾಸ್ಟರ್ ಮತ್ತು ಶ್ರೀಮತಿ ತೇಜಸ್ವಿನಿ, ಗೈಡ್ ಕ್ಯಾಪ್ಟನ್ ಮತ್ತಿತ್ತರರು ಉಪಸ್ಥಿತರಿದ್ದರು.





## ಅಭಿನಂದನೆಗಳು

ಏಪ್ರಿಲ್ 12, 2025 ರಂದು
ಅಕ್ಕಮಹಾದೇವಿ ಸಮಾಜದ ವತಿಯಿಂದ
ಶ್ರೀಮತಿ ಶಾಂತ ಎಸ್. ಯಾವಗಲ್
ಜಿಲ್ಲಾ ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದಾವಣಗೆರೆ ಜಿಲ್ಲೆ
ಇವರಿಗೆ 2025ರ 'ಅಕ್ಕ ಪ್ರಶಸ್ತಿ'ಯನ್ನು ನೀಡಲಾಯಿತು.
ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ವತಿಯಿಂದ
ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು,
ದಾವಣಗೆರೆ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಹಾಗೂ
ಯುವ ಸಮಿತಿ ಸದಸ್ಯರುಗಳು ಸನ್ಮಾನಿಸಿದರು.



# ಶಬ್ದಮಾಲಿನ್ಯ ನಿಯಂತ್ರಣಕ್ಕೆ ಎಲ್ಲರೂ ಕೈಜೋಡಿಸೋಣ



## ಶಬ್ದಮಿತಿಯ ಪ್ರಮಾಣ (ಡೆಸಿಬೆಲ್‌ಗಳಲ್ಲಿ)

| ಪ್ರದೇಶ | ಹಗಲು (ಗರಿಷ್ಠ) | ರಾತ್ರಿ (ಗರಿಷ್ಠ) |
|---|---|---|
| ಕೈಗಾರಿಕಾ ಪ್ರದೇಶ | 75 | 70 |
| ವಾಣಿಜ್ಯ ಪ್ರದೇಶ | 65 | 55 |
| ವಸತಿ ಪ್ರದೇಶ | 55 | 45 |
| ಶಬ್ದ ಸೂಕ್ಷ್ಮ ಪ್ರದೇಶ | 50 | 40 (ಶಾಲೆ, ಕೋರ್ಟ್ ,ಆಸ್ಪತ್ರೆ ಇತ್ಯಾದಿ) |

## ಶಬ್ದಮಾಲಿನ್ಯ (ನಿಯಂತ್ರಣ) ಕಾಯಿದೆಯ ನಿಯಮಗಳು

- ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಕೋರ್ಟ್ ಪ್ರದೇಶಗಳ ಸುತ್ತಮುತ್ತಲಿನ 100 ಮೀಟರ್ ವ್ಯಾಪ್ತಿ ಶಬ್ದರಹಿತವಾಗಿರಬೇಕು.
- ಸಾರ್ವಜನಿಕ ಸ್ಥಳದಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿಕೊಳ್ಳಬೇಕಾದರೆ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಂದ ಲಿಖಿತರೂಪದಲ್ಲಿ ಅನುಮತಿ ಪಡೆದುಕೊಳ್ಳಬೇಕು.
- ರಾತ್ರಿ 10 ಗಂಟೆಯಿಂದ ಬೆಳಗ್ಗೆ 6 ಗಂಟೆ ಸಮಯದಲ್ಲಿ ಸಾರ್ವಜನಿಕ ಪ್ರದೇಶದಲ್ಲಿ ಧ್ವನಿಯಂತ್ರಕಗಳನ್ನು ಬಳಸಬಾರದು.

### ಹಾರ್ನ್ ಮಾಡಲೇಬೇಡಿ

ಪಾದಚಾರಿಗಳ ಹಿಂದೆ ದಿಢೀರನೆ ಹಾರ್ನ್ ಮಾಡಿ ಅವರನ್ನು ಗಾಬರಿಪಡಿಸಬೇಡಿ. ಕೆಲವೇ ಗಳಿಗೆಗಳಲ್ಲಿ ಖಂಡಿತ ಅವರು ಸರಿಯುತ್ತಾರೆ. ಒಂದರ ಹಿಂದೆ ಒಂದರಂತೆ ಚಲಿಸುವಾಗಲೂ ಹಾರ್ನ್ ಮಾಡಬೇಡಿ. ಡಿಮ್–ಡಿಪ್ ದೀಪ ಬಳಸಿ.

### ತಾಳ್ಮೆ ಇರಲಿ

ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಾಹನಗಳು ಚಲಿಸಲು ಹಸಿರು ದೀಪದ ಸೂಚನೆ ಬಂದಾಗ ಹಿಂದಿರುವ ವಾಹನ ಸವಾರರು ಮುಂದಿರುವ ವಾಹನ ಸವಾರರರಿಗೆ ಅನವಶ್ಯಕವಾಗಿ ಹಾರ್ನ್ ಮಾಡುವ ಬದಲು ಕೆಲ ಸೆಕೆಂಡುಗಳ ಕಾಲ ತಾಳ್ಮೆಯಿಂದ ವರ್ತಿಸಬೇಕು.

### ಕಡಿಮೆ ಶಬ್ದದ ಹಾರ್ನ್, ಯಂತ್ರ ಬಳಸಿ

ವಾಹನ ಸವಾರರು ಹೆಚ್ಚಿನ ಶಬ್ದ ಮಾಡುವ ಅಥವಾ ತಮಗಿಷ್ಟ ಬಂದ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬಾರದು. ಬದಲಿಗೆ ಕಡಿಮೆ ಸದ್ದು ಮಾಡುವ ಹಾರ್ನ್ (ಗರಿಷ್ಠ 65 ಡೆಸಿಬೆಲ್) ಹಾಗೂ ಸರ್ಕಾರ ನಿಗದಿಪಡಿಸಿರುವ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬೇಕು.

### ಜನ ಜಾಗೃತಿಯಲ್ಲಿ ಪಾಲ್ಗೊಳ್ಳಿ

ಸ್ವಯಂಸೇವಾ ಸಂಘಸಂಸ್ಥೆಗಳು, ವಿದ್ಯಾರ್ಥಿಗಳು ಸರ್ಕಾರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಮ್ಮಿಕೊಳ್ಳುವ ಶಬ್ದಮಾಲಿನ್ಯ ನಿಯಂತ್ರಣ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬಹುದು.

### ಸ್ವಯಂ ನಿಯಂತ್ರಣ ಇರಲಿ

ಕೈಗಾರಿಕೆಗಳ ಮಾಲೀಕರು ಸಹ ಕಡಿಮೆ ಶಬ್ದ ಮಾಡುವ ಯಂತ್ರಗಳನ್ನು ಅಳವಡಿಸಿಕೊಳ್ಳಬೇಕು.

### ಧ್ವನಿವರ್ಧಕ ಶಬ್ದದ ಮಟ್ಟ ಕಡಿಮೆ ಮಾಡಿ

ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಧ್ವನಿವರ್ಧಕದ ಶಬ್ದ ಮಿತಿಯನ್ನು ಪಾಲಿಸಿರಿ. ಅತಿಶಬ್ದ ಖಂಡಿತ ಅನಾರೋಗ್ಯ ಉಂಟು ಮಾಡುತ್ತದೆ.

### ಮಿತಿ ಮೀರಿದರೆ ದಂಡ ಸಂಗ್ರಹ

ಟ್ರಾಫಿಕ್ ಸಿಗ್ನಲ್‌ಗಳು ಹಾಗೂ ಸಂಚಾರ ದಟ್ಟಣೆ ಹೆಚ್ಚಿರುವ ಪ್ರದೇಶಗಳಲ್ಲಿ ಅನಾವಶ್ಯಕವಾಗಿ ಹಾರ್ನ್ ಮಾಡುವವರನ್ನು ಮೋಟಾರು ವಾಹನಗಳ ಕಾಯಿದೆ ಅನ್ವಯ ಆರ್‌ಟಿಒ ಅಧಿಕಾರಿಗಳು ಪತ್ತೆ ಹಚ್ಚಿ ದಂಡ ವಿಧಿಸುವ ಅಧಿಕಾರ ಪಡೆದಿರುತ್ತಾರೆ.

# ಶಬ್ದಮಯ ದಿನಚರಿ ನಮಗೆ ಬೇಡ


ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು 560001

ವೆಬ್‌ಸೈಟ್: www.kspcb.gov.in

ಫೇಸ್‌ಬುಕ್ ಪುಟ: kspcbofficial

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 24)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26